ಸಂಪಾದಕರು: ರವಿಕುಮಾರ್ ಸಿ.ಹೆಚ್.

RNI: KARKAN/2021/80805

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYA PRAGATHI Kannada daily

SP NEWS ಡಿಜಿಟಲ್ ನ್ಯೂಸ್ ಕಹಾನಿ

ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume:05 ಸಂಪುಟ: 05 | Issue:192 ಸಂಚಿಕೆ: 192 | Date:21-08-2026 Friday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

ಗೊರವನಹಳ್ಳಿ ಮಹಾಲಕ್ಷ್ಮೀ ದೇವಸ್ಥಾನಕ್ಕೆ ಸಾವಿರಾರು ಭಕ್ತರ ದಂಡು

26 ಲಕ್ಷದ ತೇಗದ ಮರದ ರಥ, 25 ಕೆ.ಜಿ.ಯ ಬೆಳ್ಳಿ ಮಹಾಲಕ್ಷ್ಮೀ ಪ್ರತಿಷ್ಠಾಪಿಸಿ ಹೋಮ-ಹವನ

ಸೂರ್ಯಪ್ರಗತಿನ್ಯೂಸ್.ಕಾಂ

ಕೊರಟಗೆರೆ- ವರಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ ಕೊರಟಗೆರೆ ತಾಲ್ಲೂಕಿನ ಪ್ರಸಿದ್ದ ಗೊರವನಹಳ್ಳಿ ಮಹಾಲಕ್ಷ್ಮೀ ದೇವಸ್ಥಾನಕ್ಕೆ ಸಾವಿರಾರು ಭಕ್ತರ ದಂಡೇ ಹರಿದು ಬಂದು ದರ್ಶನ ಪಡೆದರು.

ಗೊರವನಹಳ್ಳಿಯ ಮಹಾಲಕ್ಷ್ಮೀ ದೇವಾಲಯದಲ್ಲಿ ವರ ಮಹಾಲಕ್ಷ್ಮೀ ಹಬ್ಬದಂದು ರಾಜ್ಯದ ವಿವಿಧ ಜಿಲ್ಲೆಗಳಿಂದ ಮತ್ತು ನೆರೆ ರಾಜ್ಯದಿಂದಲೂ ಸಹ ಸಾವಿರಾರು ಭಕ್ತರು ದರ್ಶನಕ್ಕಾಗಿ ಬಂದರು, ಶ್ರಾವಣ ಶುಕ್ರವಾರದ ಹಬ್ಬದ ದಿನದಂದು ಮಹಾಲಕ್ಷ್ಮೀ ದೇವಾಯದಲ್ಲಿ ವಿಶೇಷವಾದ ಹೂವಿನ ಅಲಂಕಾರ ಮಾಡಲಾಗಿತ್ತು, ಹಬ್ಬದ ಬೆಳಗಿನ ಜಾವದಿಂದಲೇ ಮಹಾಲಕ್ಷ್ಮೀ ದೇವಿಗೆ ಹೋಮ, ಅಭಿಷೇಕ, ಪೂಜೆ, ಸೇರಿದಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲಾಯಿತು, ಮಹಾಲಕ್ಷ್ಮೀ ದೇವಿಯನ್ನು ವಿಶೇಷವಾಗಿ ಅಲಂಕರಿಲಾಗಿತ್ತು, ಬೆಳಿಗ್ಗೆಯಿಂದಲೇ ಭಕ್ತರು ಜಮಾವಣೆಗೊಂಡರು, ಈ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಭಕ್ತರಿಗೆ ಸುಸರ್ಜಿತ ವಾಹನ ವ್ಯವಸ್ಥೆ ಮತ್ತು ದರ್ಶನ ವ್ಯವಸ್ಥೆಯನ್ನು ಪೋಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉತ್ತಮವಾಗಿ ನಿರ್ವಹಿಸಿದರು, ಬಂದಂತಹ ಭಕ್ತರಿಗೆ ಬೆಳಗಿನ ಉಪಹಾರ ಹಾಗೂ ಮದ್ಯಾಹ್ನದ ಊಟದ ವ್ಯವಸ್ಥೆಯನ್ನು ಶ್ರೀ ಮಹಾಲಕ್ಷ್ಮೀ ಚಾರಿಟಬಲ್ ಟ್ರಸ್ಟ್ ನಿರಂತರವಾಗಿ ನಡೆಸಿತು, ಈ ವರ್ಷದ ವಿಶೇಷ ಎನ್ನುವಂತೆ ಟ್ರಸ್ಟ್ ವತಿಯಿಂದ 26 ಲಕ್ಷರೂಗಳ ವೆಚ್ಚದಲ್ಲಿ ಒಂದು



ತೇಗದ ಮರದ ರಥ ಮತ್ತು ಅದರಲ್ಲಿ 25 ಕೆ.ಜಿ.ಯ ಬೆಳ್ಳಿ ಮಹಾಲಕ್ಷ್ಮೀಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ಹೋಮ ನಡೆಸಿ ಅನಾವರಣ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಟ್ರಸ್ಟ್ ಅಧ್ಯಕ್ಷ ವಾಸುದೇವ್ ಮಾತನಾಡಿ ವರಮಹಾಲಕ್ಷ್ಮೀ ಹಬ್ಬದ ದಿನವಾದ ಬೆಳಿಗ್ಗೆಯಿಂದಲೇ ಸಾವಿರಾರು ಭಕ್ತರು ಆಗಮಿಸುತ್ತಿದ್ದು ದರ್ಶನ, ಊಟ, ಪ್ರಸಾದ ಸೇರಿದಂತೆ ಎಲ್ಲವನ್ನೂ ಅಚ್ಚುಕಟ್ಟಾಗಿ ಅಯೋಜಿಲಾಗಿದೆ, ನಮ್ಮ ಟ್ರಸ್ಟ್ ಧರ್ಮದರ್ಶಿಗಳೊಂದಿಗೆ, ಸಿಬ್ಬಂದಿಗಳು, ಪೋಲೀಸ್ ಇಲಾಖೆ, ಸ್ವಯಂ ಸೇವಕರು ಸಹ ಕಾರ್ಯನಿರ್ವಹಿಸುವುದರಿಂದ ಎಲ್ಲಾವೂ ಉತ್ತಮವಾಗಿ ನಡೆಯುತ್ತಿದೆ, ಮದ್ಯಾಹ್ನದವರಿಗೆ



ಅಂದಾಜು 15 ಸಾವಿರ ಭಕ್ತರು ದರ್ಶನಕ್ಕೆ ಆಗಮಿಸಿದ್ದು ಸಂಜೆಯವರೆಗೆ 30 ಸಾವಿರ ಭಕ್ತರು ಬರುವ ಅಂದಾಜಿದೆ ಎಂದರು.

ಧರ್ಮದರ್ಶಿಗಳಾದ ಪ್ರಸಾದ್ ಮಾತನಾಡಿ ಶ್ರೀ ಮಾತೆ ಕಮಲಮ್ಮನವರಿಂದ ಪೂಜಿಲಾದ ಉದ್ಭವಮೂರ್ತಿ ಮಹಾಲಕ್ಷ್ಮೀ ಅಮ್ಮನವರ ದೇವಾಲಯ ದೇಶದಾದ್ಯಂತ ವಿಖ್ಯಾತವಾಗಿದೆ, ಈ ದೇವಾಲಯಕ್ಕೆ ಹಿಂದಿನ ಟ್ರಸ್ಟಿಗಳು ಬಹಳ ಸೇವೆ ಸಲ್ಲಿಸಿದ್ದಾರೆ, ಭಕ್ತರು ನೆರವಿನಿಂದ, ಸ್ಥಳೀಯರ ಸಹಕಾರದಿಂದ, ದೇವಾಲಯದ ಟ್ರಸ್ಟ್‌ನ ಶ್ರಮದಿಂದ ಈ ಯಾತ್ರಾ ಸ್ಥಳದಲ್ಲಿ ಎಲ್ಲವೂ ಉತ್ತಮವಾಗಿ ನಡೆಯುತ್ತಿದೆ ಎಂದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಮುರಳಿಕೃಷ್ಣ, ಖಜಾಂಚಿ ಜಗದೀಶ್, ಧರ್ಮದರ್ಶಿಗಳಾದ ರವಿ ರಾಜೇ ಅರಸ್, ನಟರಾಜು, ನಾಗರಾಜು, ವಿಶೇಷ ಅಧಿಕಾರಿ ಕೇಶವಮೂರ್ತಿ, ಇ.ಓ. ರಂಗಸ್ವಾಮಯ್ಯ, ಸೇರಿದಂತೆ ಹಲವರು ಹಾಜರಿದ್ದರು.

ಜನರ ಬಹುಕಾಲದ ಸಮಸ್ಯೆ ಬಗೆಹರಿಸಿದ್ದೇವೆ

ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು, : ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಯಡಿ ಪರಿಶೀಲನೆಯ ನಂತರ 32,000 ದಿಂದ 1,20,000 ಒಳಗಿನ ವಾರ್ಷಿಕ ಆದಾಯ ಮಿತಿ ಹೊಂದಿರುವ ಅರ್ಹ ಫಲಾನುಭವಿಗಳ ಪಿಂಚಣಿಗಳನ್ನು ಮುಂದುವರೆಸುವಂತೆ ಕಂದಾಯ ಇಲಾಖೆ ಆದೇಶ ಹೊರಡಿಸಿದೆ.

ಈ ಬಗ್ಗೆ ಮಾಹಿತಿ ನೀಡಿದ ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ.ಜಿ.ಪರಮೇಶ್ವರ ಅವರು, ವಿವಿಧ ಸಾಮಾಜಿಕ ಪಿಂಚಣಿಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಇತ್ಯಾದಿಗಳಿಗೆ 32 ಸಾವಿರ ರೂ. ಆದಾಯ ಮಿತಿ ಇತ್ತು. ಬಹಳ ದಿನಗಳಿಂದ ಇದುವೇ ಆದಾಯ ಮಿತಿಯಿದ್ದ ಕಾರಣ ಲಕ್ಷಾಂತರ ಜನರು ಪಿಂಚಣಿ ಸೌಲಭ್ಯದಿಂದ ಹೊರಗೆ ಉಳಿದಿದ್ದರು. ಅದನ್ನು 1,20,000 ಗಳಿಗೆ ಏರಿಕೆ ಮಾಡುವ ಮೂಲಕ ಬಹುಕಾಲದ ಸಮಸ್ಯೆಯನ್ನು ಬಗೆಹರಿಸಿದ್ದೇವೆ ಎಂದು ತಿಳಿಸಿದರು. ವಿವರಣೆ : ಕುಟುಂಬ ದತ್ತಾಂಶದಿಂದ ಪಡೆದ ಮಾಹಿತಿಗಳನ್ನು ರಾಜ್ಯದಲ್ಲಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಮಾಹಿತಿಯೊಂದಿಗೆ ಸಂಯೋಜಿಸಿದಾಗ 23,14,544 ಫಲಾನುಭವಿಗಳು ಸಂದೇಹಾಸ್ಪದ ಎಂದು ಕಂಡುಬಂದಿದ್ದು, ಈ ಫಲಾನುಭವಿಗಳ ಭೌತಿಕ ಪರಿಶೀಲನೆಗಾಗಿ ಸಂಯೋಜನೆ ಮೊಬೈಲ್ ಆಪ್ ಸಿದ್ಧಪಡಿಸಿ ಪರಿಶೀಲನೆ ನಡೆಸಲಾಗಿತ್ತು. ಈ ಸಮಯದಲ್ಲಿ ದಾಖಲಾತಿಗಳನ್ನು



ಹಾಜರುಪಡಿಸದ, ನೀಡಿದ ವಿಳಾಸದಲ್ಲಿ ವಾಸವಿಲ್ಲದಿದ್ದ ಮತ್ತು ಆದಾಯ ದೃಢೀಕರಣ ಪತ್ರ ಹಾಜರುಪಡಿಸದಿದ್ದ 18,06,032 ಮಂದಿಯ ಪಿಂಚಣಿಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.

ಗ್ರಾಮ ಆಡಳಿತ ಅಧಿಕಾರಿಗಳು ಸಂಯೋಜನೆ ಮೊಬೈಲ್ ಆಪ್ ಮೂಲಕ ಪರಿಶೀಲಿಸಿದ ನಂತರ ಸಂಬಂಧಪಟ್ಟ ತಾಲೂಕು ತಹಶೀಲ್ದಾರರಿಂದ ನಿಯಮಾನುಸಾರ ಪರಿಶೀಲನೆ ಮಾಡಿ ಅರ್ಹ ಫಲಾನುಭವಿಗಳಿಗೆ ಪಿಂಚಣಿ ನೀಡಲು ನಿರ್ದೇಶನ ನೀಡಲಾಗಿದೆ. ಆದರೆ, 23,14,544 ಸಂದೇಹಾಸ್ಪದ ಫಲಾನುಭವಿಗಳ ಭೌತಿಕ ಪರಿಶೀಲನೆ ಸಮಯದಲ್ಲಿ ಆದಾಯವು 32,000 ಕ್ಕಿಂತ ಹೆಚ್ಚಿರುವುದು ಕಂಡುಬಂದಿರುತ್ತದೆ.

23,14,544 ಮಂದಿಯ ಪೈಕಿ 32,000ಕ್ಕಿಂತ ಹೆಚ್ಚು ಹಾಗೂ 1,20,000ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಇರುವಂತಹ ಫಲಾನುಭವಿಗಳ ಪಿಂಚಣಿಯನ್ನು ಮುಂದುವರೆಸುವಂತೆ ಉಪ ಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ ಅವರು ಸೂಚಿಸಿದ್ದರು. ಅದರಂತೆ 23,14,544 ಮಂದಿಯ ಪೈಕಿ ಪರಿಶೀಲನೆಯ ನಂತರ 32,000ಕ್ಕಿಂತ ಹೆಚ್ಚು ಹಾಗೂ 1,20,000 ಒಳಗಿನ ವಾರ್ಷಿಕ ಆದಾಯ ಮಿತಿಯನ್ನು ಹೊಂದಿರುವ ಅರ್ಹ ಫಲಾನುಭವಿಗಳ ಪಿಂಚಣಿಗಳನ್ನು ಮುಂದುವರಿಸಲು ಕಂದಾಯ ಇಲಾಖೆಯು ಆದೇಶಿಸಿದೆ.

ಸರ್ವೇ ಗ್ಯಾರಂಟಿ ಅವಧಿಯ 30 ವರ್ಷ ಮುಕ್ತಾಯವಾದ ತರುವಾಯ, ಭೂಮಿಯ ಮೇಲೆ ಆಗಿರುವ ಎಲ್ಲಾ ಭೌಗೋಳಿಕಬದಲಾವಣೆಗಳನ್ನೊಳಗೊಡಂತೆ ರಾಜ್ಯದ ಎಲ್ಲಾ ಗ್ರಾಮಗಳನ್ನು ಮರು ಭೂಮಾಪನಕ್ಕೊಳಪಡದೇ ಇರುವುದರಿಂದ ನಕಾಶೆಯಲ್ಲಿ ಕಾಲೋಚಿತಗೊಳಿಸಲು ಸಾಧ್ಯವಾಗುತ್ತಿರುವುದಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರದ ಸಹಭಾಗಿತ್ವದ ಪ್ರಮುಖ ಯೋಜನೆಯಾದ ಸ್ವಮಿತ್ವ ಯೋಜನೆ ಮೂಲಕ ರಾಜ್ಯದ ಪ್ರತಿ ಗ್ರಾಮ ಠಾಣಾ ಆಸ್ತಿಗಳನ್ನು ಆಧುನಿಕ ಉಪಕರಣ ಬಳಸಿ, ಕಂದಾಯ ಇಲಾಖೆ/ಪಂಚಾಯತ್ ರಾಜ್ ಇಲಾಖೆ ಸಹಕಾರದೊಂದಿಗೆ ಕಾಲೋಚಿತಗೊಳಿಸುವ ಕಾರ್ಯ ಚಾಲ್ತಿಯಲ್ಲಿದ್ದು, ಹಂತ ಹಂತವಾಗಿ ಎಲ್ಲಾ ಗ್ರಾಮ ಠಾಣಾ ಆಸ್ತಿಗಳ ಸರ್ವೇ/ ಕಾಲೋಚಿತಗೊಳಿಸುವ ಕಾರ್ಯ ಕೈಗೊಳ್ಳಲಾಗುತ್ತದೆ. ಅದರಂತೆ ಸ್ವಮಿತ್ವ ಯೋಜನೆಯಡಿ ರಾಜ್ಯದಲ್ಲಿ ಗ್ರಾಮಠಾಣಾ ಆಸ್ತಿಗಳ ಅಳತೆ ಮತ್ತು ನಕ್ಷೆ ತಯಾರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ ಎಂದರು.

ಕೇಂದ್ರ ಸರ್ಕಾರದ ಗ್ರೀನ್‌ಫೀಲ್ಡ್ ನೀತಿಯ ಪ್ರಕಾರ

ತುಮಕೂರಿಗೆ ವಿಮಾನ ನಿಲ್ದಾಣ ಇಲ್ಲ

ಸೂರ್ಯಪ್ರಗತಿನ್ಯೂಸ್.ಕಾಂ

ರಾಜಧಾನಿ ಬೆಂಗಳೂರಿಗೆ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ಪ್ರತ್ಯೇಕ ವಿಮಾನ ನಿಲ್ದಾಣವನ್ನು ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸುವ ಯಾವುದೇ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿಲ್ಲ ಎಂದು ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ್ ಶಾಸನಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ವಿಧಾನಸಭೆಯಲ್ಲಿ ತುಮಕೂರು ನಗರ ಶಾಸಕ ಜಿ.ಬಿ. ಜ್ಯೋತಿ ಗಣೇಶ್ ಕೇಳಿದ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಸಚಿವರು ಉತ್ತರ ನೀಡಿದ್ದಾರೆ. ಕೇಂದ್ರ ಸರ್ಕಾರದ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ನೀತಿಯ ಪ್ರಕಾರ, ಹಾಲಿ ಇರುವ ಸಿವಿಲ್ ವಿಮಾನ ನಿಲ್ದಾಣದಿಂದ 150 ಕಿ.ಮೀ ವಾಯು ದೂರಿನಲ್ಲಿ ಇನ್ನೊಂದು ಹೊಸ ವಿಮಾನ ನಿಲ್ದಾಣಕ್ಕೆ ಸಾಮಾನ್ಯವಾಗಿ ಅನುಮತಿ ನೀಡಲಾಗುವುದಿಲ್ಲ. ಒಂದು ವೇಳೆ ಈ ವ್ಯಾಪ್ತಿಯಲ್ಲಿ ವಿಮಾನ ನಿಲ್ದಾಣ ನಿರ್ಮಿಸಬೇಕಾದರೆ, ಹಾಲಿ ಇರುವ ವಿಮಾನ ನಿಲ್ದಾಣದ ಮೇಲಾಗುವ ಪ್ರಭಾವವನ್ನು





ಆಧರಿಸಿ ಪ್ರತ್ಯೇಕವಾಗಿ ಪರಿಶೀಲಿಸಿ ಕೇಂದ್ರ ಸರ್ಕಾರ ಅಂತಿಮ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಮುಂಬರುವ ಬಜೆಟ್‌ನಲ್ಲಿ ತುಮಕೂರು ವಿಮಾನ ನಿಲ್ದಾಣಕ್ಕೆ ಹಣ ಕಾಯ್ದಿರಿಸಲಾಗುತ್ತದೆಯೇ ಎಂಬ ಪ್ರಶ್ನೆಗೆ, ಅಂತಹ ಯಾವುದೇ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲದಿರುವುದರಿಂದ ಅನುದಾನ ಹಂಚಿಕೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಸಚಿವರು ತಿಳಿಸಿದ್ದಾರೆ.

ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್, ಕೇಂದ್ರ ಸಚಿವ ವಿ. ಸೋಮಣ್ಣ ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಹಲವು ನಾಯಕರು ತುಮಕೂರಿನಲ್ಲೇ ಬೆಂಗಳೂರಿನ 2ನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಬೇಕು ಎಂದು ಬಹಿರಂಗವಾಗಿ ಆಗ್ರಹಿಸಿದ್ದರು. ಆದರೆ ಸರ್ಕಾರ ಸದ್ಯಕ್ಕೆ ಅಂತಹ ಯಾವುದೇ ಯೋಜನೆ ಹೊಂದಿಲ್ಲ ಎಂದು ಸ್ಪಷ್ಟಪಡಿಸಿದೆ.



ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಆಂಜನೇಯ ದೇವಸ್ಥಾನದಲ್ಲಿ ಮೂತ್ರ ವಿಸರ್ಜನೆ ಮಾಡಿ ವಿಕೃತಿ

ಸೂರ್ಯಪ್ರಗತಿನ್ಯೂಸ್.ಕಾಂ

ಶಿಗ್ಗಾವಿ: ಹಾವೇರಿ ಜಿಲ್ಲೆಯ ಶಿಗ್ಗಾವಿ ಪಟ್ಟಣದ ಆಂಜನೇಯ ದೇವಸ್ಥಾನದ ಆವರಣದಲ್ಲಿ ವ್ಯಕ್ತಿಯೊಬ್ಬ ಕುಡಿದ ಅಮಲಿನಲ್ಲಿ ಅನುಚಿತವಾಗಿ ವರ್ತಿಸಿ, ದೇವರ ಮೂರ್ತಿಯ ಎದುರು ಮೂತ್ರ ವಿಸರ್ಜನೆ ಮಾಡಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡಿದ್ದಾನೆ ಎಂಬ ಆರೋಪ ಕೇಳಿಬಂದಿದೆ.

ಶಿಗ್ಗಾವಿ ಪಟ್ಟಣದಲ್ಲಿ ನಡೆದಿರುವ ಈ ಘಟನೆಗೆ ಸಂಬಂಧಿಸಿದಂತೆ ಹಾನಗಲ್ ಪಟ್ಟಣದ ನಿವಾಸಿ ಎನ್ನಲಾಗಿರುವ ಮಹಮ್ಮದ್ ಜಾಫರ್ ಖದರಮಂಡಲಗಿ ಎಂಬಾತನ ವಿರುದ್ಧ ಶಿಗ್ಗಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಯನ್ನು ಪೊಲೀಸರು ಬಂಧಿಸಿ, ಪ್ರಕರಣದ ಕುರಿತು ತನಿಖೆ ಮುಂದುವರಿಸಿದ್ದಾರೆ.

ಆರೋಪಿಯು ಮದ್ಯದ ಅಮಲಿನಲ್ಲಿ ದೇವಸ್ಥಾನದೊಳಗೆ ತೆರಳಿ ಮಲಗಿದ್ದಲ್ಲದೆ, ದೇವರ ಮೂರ್ತಿಯ ಎದುರು ಮೂತ್ರ





ವಿಸರ್ಜನೆ ಮಾಡಿ ದೇವಸ್ಥಾನವನ್ನು ಅಪವಿತ್ರಗೊಳಿಸಿದ್ದಾನೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಈ ಕುರಿತು ಟೆಂಪೋ ಚಾಲಕ ಹಾಗೂ ಮಾಲಕರ ಸಂಘದ ಅಧ್ಯಕ್ಷ ಸಿದ್ದಪ್ಪ ಶಿವಪ್ಪ ಕಾಳೆ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಘಟನೆ ಬೆಳಕಿಗೆ ಬರುತ್ತಿದ್ದಂತೆ ಹಿಂದೂಪರ ಸಂಘಟನೆಗಳ ಮುಖಂಡರು ಹಾಗೂ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿ, ಶಿಗ್ಗಾವಿ ಪೊಲೀಸ್ ಠಾಣೆ ಎದುರು ಕುಳಿತು ಪ್ರತಿಭಟನೆ ನಡೆಸಿದರು.

ದೇವಸ್ಥಾನ ಶುದ್ಧೀಕರಣಕ್ಕೆ ಆಗ್ರಹ

ಘಟನೆಯ ಹಿನ್ನೆಲೆಯಲ್ಲಿ ದೇವಸ್ಥಾನವನ್ನು ಸಂಪೂರ್ಣವಾಗಿ ಶುಚಿಗೊಳಿಸಿ, ಧಾರ್ಮಿಕ ವಿಧಿ-ವಿಧಾನಗಳ ಮೂಲಕ ಶುದ್ಧೀಕರಣ ಮಾಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದರು. ಇಂತಹ ಘಟನೆಗಳು ಮರುಕಳಿಸದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಪ್ರಕರಣದ ಸತ್ಯಾಸತ್ಯತೆ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ಆರೋಪಿಯ ಹೇಳಿಕೆ ಹಾಗೂ ಲಭ್ಯ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿದುಬಂದಿದೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನು ಭೇಟಿಯಾದ ಎಂಎಲ್ಸಿ ರಾಜೇಂದ್ರ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ: ಶಾಸಕ ಹಾಗೂ ಮಾಜಿ ಸಚಿವ ಕೆ.ಎನ್. ರಾಜಣ್ಣ ಅವರ ಪುತ್ರ, ವಿಧಾನ ಪರಿಷತ್ ಸದಸ್ಯ ಆರ್.ರಾಜೇಂದ್ರ ಗುರುವಾರ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನು ಭೇಟಿ ಮಾಡಿರುವುದು ರಾಜಕೀಯ ಚರ್ಚೆಗೆ ಗ್ರಾಸವಾಗಿದೆ.

ದೇವೇಗೌಡರ ಪತ್ನಿ ಚೆನ್ನಮ್ಮ ಅವರು ಇತ್ತೀಚೆಗೆ ನಿಧನ ಹೊಂದಿದ್ದು, ಈ ಹಿನ್ನೆಲೆಯಲ್ಲಿ ಬೆಂಗಳೂರಿನ ದೇವೇಗೌಡರ ನಿವಾಸಕ್ಕೆ ತೆರಳಿದ ರಾಜೇಂದ್ರ, ಸೌಹಾರ್ದಯುತ ಭೇಟಿ ನೀಡಿ ದೇವೇಗೌಡರ ಆಶೀರ್ವಾದ ಪಡೆದರಲ್ಲದೆ ಸಾಂತ್ವನ ಹೇಳಿದರು. ಪತ್ನಿ ಚೆನ್ನಮ್ಮ ಮೃತಪಟ್ಟಾಗ ಶಾಸಕ ಕೆ.ಎನ್.ರಾಜಣ್ಣ ಹೊಳೇನರಸೀಪುರಕ್ಕೆ ತೆರಳಿ ಅಂತಿಮದರ್ಶನ ಪಡೆದಿದ್ದರು. ರಾಜಕಾರಣ ನಿಂತ ನೀರಲ್ಲ. ಹರಿಯುವ ನೀರು. ರಾಜಕೀಯದಲ್ಲಿ ಯಾರೂ ಶಾಶ್ವತ ಶತ್ರುಗಳಲ್ಲ, ಮಿತ್ರರೂ ಅಲ್ಲ. ರಾಜೇಂದ್ರ ಭೇಟಿ ಸೌಹಾರ್ದಯುತವಾದರೂ ತಾಲೂಕಿನಲ್ಲಿ ಇತ್ತೀಚೆಗೆ ನಡೆಯುತ್ತಿರುವ ರಾಜಕೀಯ ವಿಶ್ಲೇಷಣೆಗಳು ಕೆಎನ್ನಾರ್ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರುವ ವದಂತಿ ಹಬ್ಬಲು ಕಾರಣವಾಗಿದೆ. ಇದಕ್ಕೆ ಪುಷ್ಟಿ ನೀಡುವಂತೆ ಒಕ್ಕಲಿಗ ಯುವ ನಾಯಕರೊಂದಿಗೆ ಜೆಡಿಎಸ್ ವರಿಷ್ಠ



ದೇವೇಗೌಡರನ್ನು ರಾಜೇಂದ್ರ ಭೇಟಿ ಮಾಡಿರುವುದು ರಾಜಕೀಯ ತಂತ್ರಗಾರಿಕೆಯ ಭಾಗವಾಗಿರಬಹುದು ಎನ್ನಲಾಗಿದೆ.

ಕಾಂಗ್ರೆಸ್ ಸರ್ಕಾರದಲ್ಲಿ ಇತ್ತೀಚೆಗೆ ರಾಜಣ್ಣರನ್ನು ಸಚಿವ ಸ್ಥಾನಕ್ಕೆ ಪರಿಗಣಿಸದೇ ನಿರ್ಲಕ್ಷಿಸಿರುವುದು, ಹೊಸ ರಾಜಕೀಯ ಸಮೀಕರಣಕ್ಕೆ ಕಾರಣವಾಗಲಿದೆ ಎಂಬ ವಾದಗಳು ಕೇಳಿಬರುತ್ತಿವೆ. ಜೆಡಿಎಸ್ ಸೇರುವ ಬಗ್ಗೆ ಕೆಎನ್ನಾರ್‌ಗೆ ಒಲವು ಇಲ್ಲದಿದ್ದರೂ ಕ್ಷೇತ್ರದಲ್ಲಿ ನಾವಿಕನಿಲ್ಲದಂತಾಗಿರುವ ಜೆಡಿಎಸ್‌ನ ಒಂದು ಬಣ ರಾಜಣ್ಣಗೆ ಕೆಂಪುಹಾಸಿನ ಸ್ವಾಗತ ನೀಡಲು ಮುಂದಾಗಿದೆ. ಈ ಹಿಂದೆ ರಾಜಣ್ಣನವರು ಬೆಳ್ಳಾವಿ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾಗ, ತುಮಕೂರು ಜಿಲ್ಲೆಯ10 ಕ್ಷೇತ್ರಗಳಲ್ಲಿ ಜೆಡಿಎಸ್ ಪ್ರಾಬಲ್ಯ ಸಾಧಿಸಿತ್ತು. ಜೆಡಿಎಸ್ ಸೇರ್ಪಡೆಗೊಂಡಲ್ಲಿ ಜಿಲ್ಲೆಯಲ್ಲಿ ಇತಿಹಾಸ ಪುನರಾವರ್ತನೆಯಾಗಲಿದೆ ಎಂಬ ಲೆಕ್ಕಾಚಾರ ಕೆಲವರದ್ದಾಗಿದೆ. ರಾಜೇಂದ್ರ ಭೇಟಿ ನೀಡಿದ ವೇಳೆ ಜೆಡಿಎಸ್‌ನ ಬೆಂಗಳೂರು ನಗರ ಘಟಕದ ಅಧ್ಯಕ್ಷ ರಮೇಶ್‌ಗೌಡ, ಮಧುಗಿರಿ ಪುರಸಭೆ ಮಾಜಿ ಅಧ್ಯಕ್ಷ ಲಾಲಾ ಪೇಟೆ ಮಂಜುನಾಥ್, ಮುಖಂಡ ಕುರುಬಹಳ್ಳಿ ಹರ್ಷ, ಬದ್ರೆಹಳ್ಳಿ ನಾಗಾರ್ಜುನ, ಹೊಸ್ನಾಪುರ ದೀಪು, ರಘು ಹಾಗೂ ಮತ್ತಿತರರು ಇದ್ದರು.

ನಾನಾ ವಿಶ್ಲೇಷಣೆ ಗಳು ನಡೆಯುತ್ತಿದೆ: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರನ್ನು ವಿಧಾನ ಪರಿಷತ್ ಸದಸ್ಯ ರಾಜೇಂದ್ರ ಭೇಟಿ ಮಾಡಿರುವುದು ಕಾಂಗ್ರೆಸ್ ಪಾಳಯದಲ್ಲಿ ಚರ್ಚೆಗೆ ಕಾರಣವಾಗಿದೆ. ಮಾಜಿ ಸಚಿವ ರಾಜಣ್ಣ ಪುತ್ರರಾಗಿರುವ ರಾಜೇಂದ್ರ ಗುರುವಾರ ದೇವೇಗೌಡರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಸುಧಾಕರ್ ನಿಧನದಿಂದ ಹಿರಿಯೂರು ವಿಧಾನಸಭೆ ಉಪ ಚುನಾವಣೆ ಸನ್ನಿಹಿತವಾಗಿರುವಂತೆಯೇ ರಾಜಣ್ಣ ಅವರು ಜೆಡಿಎಸ್ ವರಿಷ್ಠರನ್ನು ಭೇಟಿ ಮಾಡಿರುವುದು ಕುತೂಹಲಕ್ಕೆ ಕಾರಣವಾಗಿದೆ. ಇನ್ನು ರಾಜಣ್ಣ ಅವರನ್ನು ಕಾಂಗ್ರೆಸ್ ಹೈಕಮಾಂಡ್ ನಡೆಸಿಕೊಂಡ ರೀತಿಯ ಬಗ್ಗೆ ಅಪಸ್ವರ ಕೇಳಿಬರುತ್ತಲೇ ಇತ್ತು, ಇದರ ಬೆನ್ನಲ್ಲೇ ಈ ಭೇಟಿ ಮಹತ್ವ ಪಡೆದುಕೊಂಡಿದೆ.

ಮಳೆ ಕೊರತೆ ಹಾಗೂ ಬೆಲೆ ಏರಿಕೆ ನಡುವೆಯೂ

ನಾಡಿನಾದ್ಯಂತ ಸಡಗರ ಸಂಭ್ರಮ ಹಾಗೂ ಶ್ರದ್ಧಾ ಭಕ್ತಿಯಿಂದ ವರಮಹಾಲಕ್ಷ್ಮೀ ಹಬ್ಬ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು- ಮಳೆ ಕೊರತೆ ಹಾಗೂ ಬೆಲೆ ಏರಿಕೆ ನಡುವೆಯೂ ಇಷ್ಟಾರ್ಥ ಸಿದ್ದಿಸಿ ಅಷ್ಟೈಶ್ವರ್ಯ ದಯಪಾಲಿಸುವ ವರಮಹಾಲಕ್ಷ್ಮಿ ಹಬ್ಬವನ್ನು ನಾಡಿನಾದ್ಯಂತ ಸಡಗರ ಸಂಭ್ರಮ ಹಾಗೂ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಅಷ್ಟೈಶ್ವರ್ಯ ಸಿದ್ದಿಸುವ ವರಮಹಾಲಕ್ಷ್ಮಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಿ ಸುಮಂಗಲಿಯರು, ಯುವತಿಯರು, ಮಕ್ಕಳು ವರಮಹಾಲಕ್ಷ್ಮಿ ದೇವಿಯನ್ನು ಆರಾಧಿಸಿದರು.ವರಮಹಾಲಕ್ಷ್ಮಿಯನ್ನು ಪ್ರತಿ ಮನೆ ಮನೆಯಲ್ಲೂ ವಿಶೇಷ ಅಲಂಕಾರದೊಂದಿಗೆ ಪೂಜಿಸಿ ಮಹಿಳೆಯರು, ಮಕ್ಕಳು ಆಶೀರ್ವಾದ ಪಡೆದು ಪುನೀತರಾದರು.ಈ ಬಾರಿ ಬೆಲೆ ಏರಿಕೆ ಎಂದಿಗಿಂತಲೂ ದುಪ್ಪಟ್ಟಾಗಿದ್ದರೂ ಸಹ ನಗರ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲೂ ತಮ್ಮ ಇಷ್ಟಾರ್ಥ ಸಿದ್ದಿಸುವ ವರಮಹಾಲಕ್ಷ್ಮಿ ಹಬ್ಬವನ್ನು ಸಡಗರದಿಂದ ಆಚರಿಸಿದ್ದು ಕಂಡು ಬಂತು.

ಸಂಪ್ರಾದಾಯದಂತೆ ಸುಮಂಗಲಿಯರು ಒಳ್ಳೆಯ ಘಳಿಗೆಯಲ್ಲಿ ವರಮಹಾಲಕ್ಷ್ಮಿಯನ್ನು ಪೂಜಿಸಬೇಕೆಂದು ಇಡೀ ರಾತ್ರಿ ನಿದ್ದೆ ಮಾಡದೆ ಲಕ್ಷ್ಮಿ ದೇವಿಯನ್ನು ತಮ್ಮ ತಮ್ಮ ಮನೆಗಳಲ್ಲಿ ಸಣ್ಣ ತಾಮ್ರದ ಬಿಂದಿಗೆ ಅಥವಾ ಬೆಳ್ಳಿ ಚೆಂಬನ್ನು ಕಳಶದ ರೂಪದಲ್ಲಿ ಇಟ್ಟು ಅದರಲ್ಲಿ ನೀರು ತುಂಬಿಸಿ ಅದರ ಮೇಲೆ ತೆಂಗಿನ ಕಾಯಿ ಇಟ್ಟು ಅದಕ್ಕೆ ಲಕ್ಷ್ಮಿ ಅಮ್ಮನವರ ಬೆಳ್ಳಿ ಮುಖವಾಡ ಇಟ್ಟು, ಸೀರೆ ಉಡಿಸಿ, ಒಡವೆ, ಹೂವುಗಳಿಂದ ಸಿಂಗರಿಸುವ ಕಾರ್ಯದಲ್ಲಿ



ಸೂರ್ಯಪ್ರಗತಿ ದಿನಪತ್ರಿಕೆ ಸಂಪಾದಕರಾದ ರವಿಕುಮಾರ್ ಅವರ ಮನೆಯಲ್ಲಿ ಶ್ರದ್ಧಾಭಕ್ತಿಯಿಂದ ವರಮಹಾಲಕ್ಷ್ಮೀ ವ್ರತಾಚರಣೆ ಮಾಡಲಾಯಿತು. ಈ ವೇಳೆ ನಾಡಿನ ಜನರಿಗೆ ಮಳೆ, ಬೆಳೆ, ಆರೋಗ್ಯ ನೀಡುವಂತೆ ಕೋರಲಾಯಿತು. ಈ ಸಂದರ್ಭದಲ್ಲಿ ಕಾರುಣ್ಯ- ಲಾವಣ್ಯ, ಕೀರ್ತಿ ಇತರರು ಇದ್ದರು.

ನಿರತರಾಗಿದ್ದ ದೃಶ್ಯಗಳು ಕಂಡು ಬಂದವು.

ಮನೆಗಳಲ್ಲಿ ವರಮಹಾಲಕ್ಷ್ಮಿ ದೇವಿಯ ಮುಖವಾಡಕ್ಕೆ ವಿಶೇಷ ಅಲಂಕಾರ ಮಾಡಿ, ಹಬ್ಬದ ಅಂಗವಾಗಿ ತಯಾರಿಸಿದ್ದ ಬಗೆ ಬಗೆಯ ಸಿಹಿ ತಿಂಡಿಗಳು ಸೇರಿದಂತೆ ಇನ್ನಿತರೆ ಖಾದ್ಯಗಳನ್ನು ನೈವೇದ್ಯಕ್ಕೆ ಇಟ್ಟು ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಇಷ್ಟಾರ್ಥ ಸಿದ್ದಿಸುವಂತೆ ಸುಮಂಗಲಿಯರು, ಮಕ್ಕಳು ಪ್ರಾರ್ಥಿಸಿದರು.

ಇಷ್ಟಾರ್ಥಗಳನ್ನು ಸಿದ್ದಿಸುವ ವರಮಹಾಲಕ್ಷ್ಮಿ ಹಬ್ಬದಲ್ಲಿ ಮುತ್ತೈದೆಯರು ಮನೆಗಳಿಗೆ ಬಂದು ಅರಿಶಿನ-ಕುಂಕುಮ ಪಡೆದು ಹರಸಿದರೆ ಹಬ್ಬದ ಸಂಭ್ರಮದ ಇಮ್ಮಡಿಗೊಂಡು ಮಹಿಳೆಯರಲ್ಲಿ ಧನ್ಯತಾ ಭಾವ ಎದ್ದು ಕಾಣುತ್ತದೆ. ಅದರಂತೆ ಪ್ರತಿಯೊಬ್ಬರ ಮನೆಯಲ್ಲೂ ಸುಮಂಗಲಿಯರಿಗೆ ಅರಿಶಿನ-ಕುಂಕುಮ ನೀಡಿ ಅವರಿಂದ ಆಶೀರ್ವಾದ ಪಡೆಯುತ್ತಿದ್ದ ದೃಶ್ಯಗಳು ಸಹ ಕಂಡು ಬಂದವು.

ಇಂದು ಬೆಳಿಗ್ಗೆಯಿಂದಲೂ ಮಹಿಳೆಯರು, ಮಕ್ಕಳು ನಗರದ ವಿವಿಧ ಬಡಾವಣೆಗಳಲ್ಲಿರುವ ಲಕ್ಷ್ಮಿ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು.


ನಗರದ ಬಿ.ಹೆಚ್. ರಸ್ತೆಯಲ್ಲಿರುವ ಟಿಜಿಎಂಸಿ ಬ್ಯಾಂಕ್ ಆವರಣದಲ್ಲಿರುವ ಮಹಾಲಕ್ಷ್ಮಿ ದೇವಾಲಯ ಸೇರಿದಂತೆ ವಿವಿಧ ಬಡಾವಣೆಗಳಲ್ಲಿರುವ ಶ್ರೀ ಲಕ್ಷ್ಮಿ ದೇವಾಲಯಗಳಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜೆಗಳು ನೆರವೇರಿದವು.

ಟಿಜಿಎಂಸಿ ಬ್ಯಾಂಕ್ ಆವರಣದಲ್ಲಿ ಶ್ರೀ ಲಕ್ಷ್ಮಿ ದೇವಾಲಯದಲ್ಲಿ ಬೆಳಿಗ್ಗೆಯಿಂದಲೇ ಹಬ್ಬದ ಅಂಗವಾಗಿ ವಿಶೇಷ ಧಾರ್ಮಿಕ ವಿಧಿ ವಿಧಾನಗಳು ನೆರವೇರಿಸಲಾಗಿದ್ದು, ಅಮ್ಮನವರಿಗೆ ವಿಶೇಷ ಅಲಂಕಾರ ಮಾಡಲಾಗಿದೆ. ಭಕ್ತಾದಿಗಳು ಸಹ ಸರದಿ ಸಾಲಿನಲ್ಲಿ ನಿಂತು ಅಮ್ಮನವರ ದರ್ಶನ ಪಡೆದರು.

ವರಮಹಾಲಕ್ಷ್ಮಿ ಹಬ್ಬ ಆಚರಣೆಗೆ ಹೂವು, ಹಣ್ಣು ಹಂಪಲುಗಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದರೂ ಸಹ ಯಾವುದನ್ನೂ ಲೆಕ್ಕಿಸದೆ ಜನಸಾಮಾನ್ಯರು ಹಬ್ಬವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಿದ್ದು ವಿಶೇಷವಾಗಿತ್ತು.

ಟಿಕೆಟ್ ದಾಖಲೆ ಮಾರಾಟ: 1.65 ಲಕ್ಷ ಮುಂಗಡ ಟಿಕೆಟ್ ಬುಕ್ಕಿಂಗ್; ಹಿಂದಿಯಲ್ಲೇ ಮೊದಲ ದಿನ 50 ಕೋಟಿ ಗಳಿಕೆ ಸಾಧ್ಯತೆ

ಸೂರ್ಯಪ್ರಗತಿನ್ಯೂಸ್.ಕಾಂ



ಯಶ್ ನಟನೆಯ 'Toxic' ಚಿತ್ರ ಆಗಸ್ಟ್ 26ರಂದು ಬಿಡುಗಡೆಯಾಗುತ್ತಿದ್ದು ಅಭಿಮಾನಿಗಳು ಚಿತ್ರಕ್ಕಾಗಿ ಉತ್ಸುಕರಾಗಿದ್ದಾರೆ. ಆಗಸ್ಟ್ 21ರ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಮುಂಗಡ ಬುಕಿಂಗ್ ಪ್ರಾರಂಭವಾಯಿತು. ಬುಕಿಂಗ್ ಪ್ರಾರಂಭವಾದ ತಕ್ಷಣ ಚಿತ್ರವು ಬಾಕ್ಸ್ ಆಫೀಸ್ ಇತಿಹಾಸವನ್ನು ಸೃಷ್ಟಿಸಿದ್ದು ಅದ್ಭುತ ಆರಂಭ ಸಿಕ್ಕಿದೆ. ಇದು ಬಲವಾದ ಗಳಿಕೆಯನ್ನು ಗಳಿಸುವ ನಿರೀಕ್ಷೆಯಿದೆ.

ಬಾಲಿವುಡ್ ಹಂಗಾಮಾ ವರದಿಯ ಪ್ರಕಾರ, ಬುಕಿಂಗ್ ಪ್ರಾರಂಭವಾದ ಕೇವಲ 6 ಗಂಟೆಗಳಲ್ಲಿ 'ಟಾಕ್ಸಿಕ್' ಚಿತ್ರದ 30,000 ಟಿಕೆಟ್‌ಗಳು ಅಗ್ರಮೂರು ರಾಷ್ಟ್ರೀಯ ಸರಪಳಿಗಳಲ್ಲಿ (ಪಿವಿಆರ್, ಐನಾಕ್ಸ್ ಮತ್ತು ಸಿನೆಪೊಲಿಸ್) ಬುಕ್ ಆಗಿವೆ. ಇದರ ಆಧಾರದ ಮೇಲೆ, 'ಟಾಕ್ಸಿಕ್' ತನ್ನ ಮೊದಲ ದಿನ ಹಿಂದಿಯಲ್ಲಿ ಮಾತ್ರ 45–50 ಕೋಟಿ ಗಳಿಸಬಹುದು ಎಂದು ಅಂದಾಜಿಸಲಾಗಿದೆ. SACNILC ಪ್ರಕಾರ, ಟಾಕ್ಸಿಕ್ ತನ್ನ ಮೊದಲ ದಿನದ 1,65,654 ಟಿಕೆಟ್‌ಗಳನ್ನು ಭಾರತದಾದ್ಯಂತ ಮಾರಾಟ ಮಾಡಿದೆ. ಬುಕಿಂಗ್‌ಗಳು 6,857 ಪ್ರದರ್ಶನಗಳಿಂದ ಒಟ್ಟು 7.2 ಕೋಟಿ ರೂ.ಗಳನ್ನು ಗಳಿಸಿವೆ. ಈ ಅಂಕಿಅಂಶಗಳು ನಿರ್ಬಂಧಿಸಲಾದ ಸೀಟುಗಳನ್ನು ಒಳಗೊಂಡಿಲ್ಲ. ನಿರ್ಬಂಧಿಸಲಾದ ಸೀಟುಗಳನ್ನು ಸೇರಿಸಿದಾಗ, ಚಿತ್ರದ ಮುಂಗಡ ಬುಕಿಂಗ್ ಒಟ್ಟು 13.19 ಕೋಟಿ ರೂ. ಗಳಿಗೆ ಏರುತ್ತದೆ. ಚಿತ್ರ ಬಿಡುಗಡೆಯಾಗಲು ಇನ್ನೂ ಐದು ದಿನಗಳು ಬಾಕಿ ಇರುವುದರಿಂದ, ಮುಂಬರುವ ದಿನಗಳಲ್ಲಿ ಅದರ ಮುಂಗಡ ಮಾರಾಟ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆಯಿದೆ.

ಕರ್ನಾಟಕವು ಮುಂಗಡ ಬುಕಿಂಗ್‌ನಲ್ಲಿ ಮುಂಚೂಣಿ ಕರ್ನಾಟಕವು ಚಿತ್ರದ ಮುಂಗಡ ಬುಕಿಂಗ್‌ಗೆ ಅತಿದೊಡ್ಡ ಕೊಡುಗೆ ನೀಡಿದೆ. ನಿರ್ಬಂಧಿಸಲಾದ ಸೀಟುಗಳನ್ನು ಒಳಗೊಂಡಂತೆ ಟಾಕ್ಸಿಕ್ ರಾಜ್ಯದಲ್ಲಿ ಮುಂಗಡ ಬುಕಿಂಗ್‌ಗಳಲ್ಲಿ ರೂ. 8.08 ಕೋಟಿ ಗಳಿಸಿದೆ. ಟಾಕ್ಸಿಕ್ ಚಿತ್ರವನ್ನು ಗೀತು ಮೋಹನ್ದಾಸ್ ನಿರ್ದೇಶಿಸಿದ್ದಾರೆ. ಹುಮಾ ಖುರೇಷಿ, ನಯನತಾರಾ, ತಾರಾ ಸುತಾರಿಯಾ, ರುಕ್ಮಿಣಿ ವಸಂತ ಮತ್ತು ಕಿಯಾರಾ ಅಡ್ವಾಣಿ ಅವರೊಂದಿಗೆ ಯಶ್ ನಟಿಸಿದ್ದಾರೆ. ಈ ಚಿತ್ರ ಕನ್ನಡ, ತಮಿಳು, ತೆಲುಗು, ಮಲಯಾಳಂ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿಯೂ ಬಿಡುಗಡೆಯಾಗಲಿದೆ.

ಒಂಟಿತನ ಹೃದಯದ ಮೇಲೆ ಪರಿಣಾಮ

ಹೃದಯದ ಆರೋಗ್ಯ ಎಂದರೆ ಕೇವಲ ಕೊಲೆಸ್ಟ್ರಾಲ್, ರಕ್ತದೊತ್ತಡ ಅಥವಾ ದಿನಕ್ಕೆ ಎಷ್ಟು ಹೆಜ್ಜೆ ನಡೆಯುತ್ತೇವೆ ಎಂಬುದಷ್ಟೇ ಅಲ್ಲ. ನಮ್ಮ ಮಾನಸಿಕ ಆರೋಗ್ಯ ಮತ್ತು ಸಾಮಾಜಿಕ ಸಂಪರ್ಕವೂ ಹೃದಯದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಅಮೆರಿಕದ ಹೃದಯ ಶಸ್ತ್ರಚಿಕಿತ್ಸಕ ಡಾ. ಜೆರೆಮಿ ಲಂಡನ್ ಅವರು ಹಲವು ವರ್ಷಗಳ ಅನುಭವದ ಆಧಾರದ ಮೇಲೆ ಹೃದಯದ ಆರೋಗ್ಯ ಕಾಪಾಡಿಕೊಳ್ಳಲು ತಾವು ದೂರವಿಡುವ ಐದು ಅಭ್ಯಾಸಗಳನ್ನು ಹಂಚಿಕೊಂಡಿದ್ದಾರೆ. ಅದರಲ್ಲಿ ಒಂಟಿತನ ಕೂಡ ಪ್ರಮುಖ ಸ್ಥಾನ ಪಡೆದಿದೆ. ಧೂಮಪಾನ, ಅತಿಯಾಗಿ ಸಂಸ್ಕರಿಸಿದ ಆಹಾರ, ದೈಹಿಕ ಚಟುವಟಿಕೆಯ ಕೊರತೆ, ಒಂಟಿತನ ಮತ್ತು ದೀರ್ಘಕಾಲದ ಒತ್ತಡವನ್ನು ಹೃದಯದ ಆರೋಗ್ಯಕ್ಕೆ ಅಪಾಯಕಾರಿ ಅಂಶಗಳು ಎಂದು ಅವರು ಹೇಳಿದ್ದಾರೆ.

ಒಂಟಿತನ ಹೃದಯದ ಆರೋಗ್ಯಕ್ಕೆ ಹೇಗೆ ಹಾನಿ ಮಾಡಬಹುದು?

ಒಂಟಿಯಾಗಿರುವುದು ಎಂದರೆ ಕೇವಲ ಮನೆಯಲ್ಲಿ ಒಬ್ಬರೇ ವಾಸಿಸುವುದು ಎಂದಲ್ಲ. ಅರ್ಥಪೂರ್ಣ ಸಾಮಾಜಿಕ ಸಂಪರ್ಕದ ಕೊರತೆಯ ಅನುಭವವೇ ಒಂಟಿತನ. ಸಾಮಾಜಿಕ ಪ್ರತ್ಯೇಕತೆ ಎಂದರೆ ವ್ಯಕ್ತಿಗೆ ಇತರರೊಂದಿಗೆ ಇರುವ ಸಂಪರ್ಕ ಅಥವಾ ಸಾಮಾಜಿಕ ಸಂವಹನ ಕಡಿಮೆ ಇರುವುದು. ಸಂಶೋಧನೆಗಳಲ್ಲಿ ದೀರ್ಘಕಾಲದ ಒಂಟಿತನ ಮತ್ತು ಸಾಮಾಜಿಕ ಪ್ರತ್ಯೇಕತೆ ಹೃದಯರೋಗ, ಪಾರ್ಶ್ವವಾಯು ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳ ಅಪಾಯ ಹೆಚ್ಚಿಸಬಹುದು ಎಂಬುದು ಕಂಡುಬಂದಿದೆ. ದೀರ್ಘಕಾಲದ ಒತ್ತಡ, ನಿದ್ರೆಯ ಸಮಸ್ಯೆಗಳು, ದೈಹಿಕ ಚಟುವಟಿಕೆಯ ಕೊರತೆ ಹಾಗೂ ಆರೋಗ್ಯಕರ ಅಭ್ಯಾಸಗಳ ಕಡೆಗೆ ನಿರ್ಲಕ್ಷ್ಯ ಇತ್ಯಾದಿಗಳು ಹೃದಯದ ಆರೋಗ್ಯದ ಮೇಲೆ ಪರೋಕ್ಷವಾಗಿ ಪರಿಣಾಮ ಬೀರಬಹುದು.

ಧೂಮಪಾನ ಮತ್ತು ವೇಪಿಂಗ್‌ನಿಂದ ದೂರವಿರಿ

ಹೃದಯದ ಆರೋಗ್ಯದ ದೃಷ್ಟಿಯಿಂದ ಧೂಮಪಾನ ಅತ್ಯಂತ ಪ್ರಮುಖ ಅಪಾಯಕಾರಿ ಅಭ್ಯಾಸಗಳಲ್ಲಿ ಒಂದಾಗಿದೆ. ಸಿಗರೇಟ್‌ನಲ್ಲಿರುವ ನಿಕೋಟಿನ್ ಹೃದಯ ಬಡಿತ ಮತ್ತು ರಕ್ತದೊತ್ತಡವನ್ನು ಹೆಚ್ಚಿಸಬಹುದು. ಧೂಮಪಾನವು ರಕ್ತನಾಳಗಳಿಗೆ ಹಾನಿ ಮಾಡುವ ಮೂಲಕ ಹೃದಯರೋಗದ ಅಪಾಯವನ್ನು ಹೆಚ್ಚಿಸುತ್ತದೆ. ವೇಪಿಂಗ್ ಕೂಡ ಒಳ್ಳೆಯದಲ್ಲ. ಆದ್ದರಿಂದ ಹೃದಯದ ಆರೋಗ್ಯಕ್ಕಾಗಿ ಸಿಗರೇಟ್, ತಂಬಾಕು ಮತ್ತು ಇ-ಸಿಗರೇಟ್‌ಗಳಿಂದ ದೂರವಿರುವುದು ಒಳ್ಳೆಯದು.

ಅತಿಯಾಗಿ ಸಂಸ್ಕರಿಸಿದ ಆಹಾರವನ್ನು ಸೇವಿಸಬೇಡಿ

ಅಲ್ಟ್ರಾ-ಪ್ರೊಸೆಸ್ಡ್ ಫುಡ್ಸ್‌ಗಳಲ್ಲಿ ಹೆಚ್ಚುವರಿ ಉಪ್ಪು, ಸಕ್ಕರೆ ಮತ್ತು ಅನಾರೋಗ್ಯಕರ ಕೊಬ್ಬು ಇರಬಹುದಾಗಿದೆ. ಇಂತಹ ಆಹಾರವನ್ನು ಹೆಚ್ಚಾಗಿ ಸೇವಿಸುವುದು ದೀರ್ಘಕಾಲದಲ್ಲಿ ಹೃದಯದ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು. ಹೀಗಾಗಿ ಆಹಾರದಲ್ಲಿ ತರಕಾರಿ, ಹಣ್ಣುಗಳು, ಬೇಳೆಕಾಳುಗಳು, ಸಂಪೂರ್ಣ ಧಾನ್ಯಗಳು ಮತ್ತು ನಟ್ಸ್‌ಗಳಂತಹ ಕಡಿಮೆ ಸಂಸ್ಕರಿಸಿದ ಆಹಾರಗಳಿಗೆ ಆದ್ಯತೆ ನೀಡುವುದು ಬಹಳ ಉತ್ತಮ.

ಸಣ್ ಸುದ್ದಿ



ಮಧುಗಿರಿ :-ತಾಲೂಕಿನ ಸ್ಥಳೀಯ ಕಲಾವಿದರು ವರಮಹಾಲಕ್ಷ್ಮಿ ಹಬ್ಬದಂದು ಐತಿಹಾಸಿಕ ಶ್ರೀ ದಂಡಿನ ಮಾರಮ್ಮ ದೇವಾಲಯದ ಆವರಣದಲ್ಲಿ 13 ನಿಮಿಷಗಳ ಕಾಲದ ಯೂಟ್ಯೂಬ್ ನ ಸಾಮಾಜಿಕ ಜಾಲತಾಣದಲ್ಲಿ ಪ್ರಸಾರವಾಗುವ ಕಿರುಚಿತ್ರ "ಮುಗಿಯದ ಪ್ರೇಮ ಕಥೆ" ಬಿಡುಗಡೆಗೊಳಿಸಿದರು. ಈ ಕಿರು ಚಿತ್ರವನ್ನು ನರಹ ಪ್ರೊಡಕ್ಷನ್ ಯೂಟ್ಯೂಬ್ ಚಾನೆಲ್ ನಲ್ಲಿ ವೀಕ್ಷಿಸಬಹುದಾಗಿದ್ದು ಆದರ್ಶ ಕಥೆ ಮತ್ತು ನಿರ್ದೇಶನ ಮಾಡಿದ್ದು, ಶಿವು ಮದುಗಿರಿಯವರು ಛಾಯಾಗ್ರಾಹಣ ಮಾಡಿದ್ದಾರೆ .ಜಾನ್ ಕಿನಾಡಿ ಸಂಗೀತ, ಅಶೋಕ್ ಬೈರೇನಹಳ್ಳಿ ಸಾಹಿತ್ಯ, ಬುಜ್ಜಿ ಗಿರೀಶ್ ಪೋಸ್ಟರ್ ವಿನ್ಯಾಸ ಮಾಡಿದ್ದು, ಈ ಚಿತ್ರದಲ್ಲಿ ಕಲಾವಿದರಾಗಿ ಆದರ್ಶ ವೀಣಾ ಕುಮಾರಿ ,ಕೀರ್ತಿ ,ಅಶೋಕ್ ಬೈರನಹಳ್ಳಿ ರಾಕಿ ಮಧುಗಿರಿರವರು ಅಭಿನಯಿಸಿದ್ದಾರೆ.

ನಾಟಕ ಅಕಾಡೆಮಿ ಪ್ರಶಸ್ತಿ ಪ್ರಕಟ: 25 ಕಲಾವಿದರಿಗೆ ವಾರ್ಷಿಕ, 7 ಮಂದಿಗೆ ದತ್ತಿನಿಧಿ ಪ್ರಶಸ್ತಿ

ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು 2026–27ನೇ ಸಾಲಿನ ಜೀವಮಾನ ಸಾಧನೆ ಗೌರವ ಪ್ರಶಸ್ತಿ, ವಾರ್ಷಿಕ ಪ್ರಶಸ್ತಿ ಹಾಗೂ ವಿವಿಧ ದತ್ತಿನಿಧಿ ಪುರಸ್ಕಾರಗಳನ್ನು ಗುರುವಾರ ಪ್ರಕಟಿ ಸಿದೆ. ರಂಗ ಭೂಮಿ ಕ್ಷೇತ್ರಕ್ಕೆ ಸಲ್ಲಿಸಿರುವ ದೀರ್ಘ ಕಾಲದ ಸೇವೆ ಗುರುತಿಸಿ ಹಿರಿಯ ನಟ ಡಾ.ಮುಖ್ಯ ಮಂತ್ರಿ ಚಂದ್ರು ಅವರಿಗೆ ಜೀವಮಾನ ಸಾಧನೆ ಗೌರವ ಪ್ರಶಸ್ತಿ ಘೋಷಿಸಲಾಗಿದೆ.

ಕನ್ನಡ ರಂಗಭೂಮಿ ಹಾಗೂ ಚಲನಚಿತ್ರ ಕ್ಷೇತ್ರದಲ್ಲಿ ಹಲವು ದಶಕಗಳಿಂದ ಅಭಿನಯದ ಮೂಲಕ ಗಮನ ಸೆಳೆದಿರುವ ಮುಖ್ಯಮಂತ್ರಿ ಚಂದ್ರು ಅವರು ರಂಗಭೂಮಿಗೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಈ ಗೌರವಕ್ಕೆ ಆಯ್ಕೆಯಾಗಿದ್ದಾರೆ.

25 ಸಾಧಕರಿಗೆ ವಾರ್ಷಿಕ ಪ್ರಶಸ್ತಿ: ರಾಜ್ಯದ ವಿವಿಧ ಜಿಲ್ಲೆಗಳಿಂದ ರಂಗಭೂಮಿ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿರುವ 25 ಕಲಾವಿದರನ್ನು ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ವಿಶ್ವೇಶ್ವರಿ ಬಸವಲಿಂಗಯ್ಯ ಹಿರೇಮಠ (ಧಾರವಾಡ), ರಮೇಶ ತಿಪ್ಪಣ್ಣ ಚಿತ್ರಗಾರ (ಬಾಗಲಕೋಟೆ), ಶಿವಾನಂದ ತಗಡೂರು (ಬೆಂಗಳೂರು), ಆರ್. ರಾಮಕೃಷ್ಣ (ದೇವನಹಳ್ಳಿ), ಅನುಸೂಯ ರೇವಣಸಿದ್ದಯ್ಯ ಹೊಸೂರುಮಠ (ಲಕ್ಕುಂಡಿ), ಅಯ್ಯಣ್ಣ ಸ್ವಾಮಿ ಹಿರೇಮಠ (ಕಲಬುರಗಿ) ಸೇರಿದಂತೆ ಒಟ್ಟು 25 ಜನರಿಗೆ ವಾರ್ಷಿಕ ಪ್ರಶಸ್ತಿ ಪ್ರಕಟಿಸಿದೆ. ಏಳು ಮಂದಿಗೆ ದತ್ತಿನಿಧಿ ಪುರಸ್ಕಾರ: ಎಸ್.ವಿ.ವೆಂಕಟಸುಬ್ಬಯ್ಯ ದತ್ತಿ ಪುರಸ್ಕಾರಗೆ ಬಿ.ಜಿ. ಶ್ರೀಧರ್, ಇ.ಆರ್. ಅರಿಶಿಣಗೋಡಿ ದತ್ತಿ ಪುರಸ್ಕಾರಗೆ ಅಶಾಕ್ ಹುಸೇನ್ ಹಾ. ಜಾಗೀರದಾರ್, ಕೆ. ರಾಮಚಂದ್ರಯ್ಯ ದತ್ತಿ ಪುರಸ್ಕಾರಗೆ ಡಾ. ಎಂ. ಚಂದ್ರಪ್ಪ, ಮಾಲತಿಶ್ರೀ ಮೈಸೂರು ದತ್ತಿ ಪುರಸ್ಕಾರಗೆ ದಯಾನಂದ ಚ ಬೆಳಗಿ, ನಟರತ್ನ ಚಿಂದೋಡಿ ವೀರಪ್ಪನವರ ದತ್ತಿ ಪುರಸ್ಕಾರಗೆ ಗಂಗಾಧರ ರೆಡ್ಡಿ ಬಿ.ಆರ್. ಪದ್ಮಶ್ರೀ ಚಿಂದೋಡಿ ಲೀಲಾ ದತ್ತಿ ಪುರಸ್ಕಾರಗೆ ವೈ.ಎನ್.ಶಿವಣ್ಣ , ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ ದತ್ತಿ ಪುರಸ್ಕಾರಗೆ ಚಂದ್ರಮ್ಮ ಅವರು ದತ್ತಿನಿಧಿ ಪುರಸ್ಕಾರ ಲಭಿಸಿದೆ. ರಂಗಭೂಮಿ ಕ್ಷೇತ್ರದ ಹಿರಿಯ ಹಾಗೂ ಪ್ರತಿಭಾವಂತ ಕಲಾವಿದರ ಸೇವೆಯನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಕರ್ನಾಟಕ ನಾಟಕ ಅಕಾಡೆಮಿ ಪ್ರತಿವರ್ಷ ಈ ಪ್ರಶಸ್ತಿಗಳನ್ನು ನೀಡುತ್ತಿದೆ ಎಂದು ನಾಟಕ ಅಕಾಡಮಿ ತಿಳಿಸಿದೆ.

ಪತ್ನಿ ವಾಪಾಸ್ ಬರಲಿಲ್ಲ ಪತಿ ಮನನೊಂದು ಆತ್ಮಹತ್ಯೆ



ತುಮಕೂರು: ಪತ್ನಿ ವಾಪಾಸ್ ಬರಲಿಲ್ಲ ಎಂಬ ಬೇಸರದಲ್ಲಿ ಯುವಕ ಆತ್ಮಹತ್ಯೆ

ತುಮಕೂರು: ಜಿಲ್ಲೆಯ ಕುಣಿಗಲ್ ಪಟ್ಟಣದ ಮಹಾವೀರ ನಗರದಲ್ಲಿ ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವರದಿಯಾಗಿದೆ. ಮೃತನನ್ನು 28 ವರ್ಷದ ಅವಿನಾಶ್ ಎಂದು ಗುರುತಿಸಲಾಗಿದೆ. ಕಳೆದ 6 ತಿಂಗಳ ಹಿಂದಷ್ಟೇ ಹಾಸನ ಜಿಲ್ಲೆ ಅರಸೀಕೆರೆ ಮೂಲದ ಯುವತಿಯನ್ನು ಪ್ರೀತಿಸಿ ವಿವಾಹವಾಗಿದ್ದರು.

ಆಷಾಢದ ಹಿನ್ನೆಲೆಯಲ್ಲಿ ಪತ್ನಿ ತವರು ಮನೆಗೆ ತೆರಳಿದ್ದರು. ಮನೆಗೆ ವಾಪಾಸ್ ಬರುವಂತೆ ಅವಿನಾಶ್ ಪತ್ನಿಗೆ ಕರೆ ಮಾಡಿದ್ದರು ಎನ್ನಲಾಗಿದೆ. ಈ ವೇಳೆ ಪತ್ನಿ ಈಗ ಬರಲು ಆಗುವುದಿಲ್ಲ ಎಂದು ಹೇಳಿದ ಮಾತು ಅವಿನಾಶ್ ಅವರನ್ನು ನೊಂದಿತ್ತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಮನೆಯಲ್ಲಿ ಯಾರೂ ಇಲ್ಲದ ವೇಳೆ ಅವಿನಾಶ್ ಆತ್ಮಹತ್ಯೆಗೆ ಶರಣಾಗಿದ್ದಾರೆ. ವಿಷಯ ತಿಳಿದ ತಕ್ಷಣ ಕುಣಿಗಲ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಕುಣಿಗಲ್ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ರವಾನಿಸಲಾಗಿದೆ. ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಟುಂಬ ಕಲಹವೇ ಆತ್ಮಹತ್ಯೆಗೆ ಕಾರಣವೇ ಎಂಬ ನಿಟ್ಟಿನಲ್ಲಿ ತನಿಖೆ ಮುಂದುವರೆದಿದೆ.

ಪವರ್ ಟ್ರ್ಯಾನ್ಸ್ಮಿಷನ್ ಲೈನ್ ಸಾಗುವ ಭೂಮಿಗೆ ಸರ್ಕಾರವೇ ಪರಿಹಾರವನ್ನು ನೀಡುತ್ತದೆ; ಪರಿಹಾರ ಪಡೆದ ನಂತರವೂ ಭೂಮಿಯ ಮಾಲೀಕತ್ವ ಭೂಮಾಲೀಕರ ಬಳಿಯೇ ಇರುತ್ತದೆ

ಸೂರ್ಯಪ್ರಗತಿನ್ಯೂಸ್.ಕಾಂ



ಬೆಂಗಳೂರು: ಮನೆಯಲ್ಲಿ, ಜಮೀನಿನಲ್ಲಿ ಅಥವಾ ಕಾರ್ಖಾನೆಯಲ್ಲಿ ಒಂದು ಸ್ವಿಚ್ ಆನ್ ಆಗುವ ಮೊದಲು, ವಿದ್ಯುತ್ ನೂರಾರು ಕಿಲೋಮೀಟರ್‌ಗಳಷ್ಟು ತೆರೆದ ಭೂಮಿಯ ಮೂಲಕ ಪ್ರಯಾಣಿಸಿರುತ್ತದೆ. ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ನಗರಗಳು, ಕೈಗಾರಿಕೆಗಳು ಮತ್ತು ಗ್ರಾಮೀಣ ಪ್ರದೇಶಗಳಿಗೆ ವಿದ್ಯುತ್ ಸಾಗಿಸುವಲ್ಲಿ ಪ್ರಸರಣ ಮಾರ್ಗಗಳು ಮತ್ತು ಗೋಪುರಗಳು ವಿದ್ಯುತ್ ಜಾಲದ ಬೆನ್ನೆಲುಬಾಗಿವೆ. ಈ ಜಾಲವನ್ನು ನಿರ್ಮಿಸಲು ಹೆಚ್ಚಾಗಿ ಖಾಸಗಿ ಕೃಷಿ ಭೂಮಿಯ ಮೂಲಕ ಪ್ರಸರಣ ಮೂಲಸೌಕರ್ಯ ಹಾದು ಹೋಗಬೇಕಾಗುತ್ತದೆ.

ಕರ್ನಾಟಕದಲ್ಲಿ ಪ್ರಸರಣ ಮಾರ್ಗಗಳು ಖಾಸಗಿ ಭೂಮಿಯ ಮೂಲಕ ಹಾದು ಹೋದಾಗ, ಗೋಪುರಗಳು, ಅಡಿಪಾಯಗಳು ಮತ್ತು ಭೂ ಬಳಕೆಯ ಮೇಲಿನ ನಿರ್ಬಂಧಗಳಿಂದ ಉಂಟಾಗುವ ಪರಿಣಾಮಕ್ಕೆ ಭೂಮಾಲೀಕರು ಪರಿಹಾರಕ್ಕೆ ಅರ್ಹರಾಗಿರುತ್ತಾರೆ. ಪರಿಹಾರದ ಚೌಕಟ್ಟನ್ನು ಸರ್ಕಾರದ ನೀತಿ, ಕಾನೂನುಗಳು ಮತ್ತು ಅಧಿಸೂಚಿತ ಮಾರ್ಗಸೂಚಿಗಳಿಂದ ನಿರ್ಧರಿಸಲಾಗುತ್ತದೆ. ಇದನ್ನು ಪ್ರಸರಣ ಕಂಪನಿಯು ಮಾತ್ರ ನಿರ್ಧರಿಸುವುದಿಲ್ಲ. ಬಾಧಿತ ಭೂಮಿಯನ್ನು ಮೌಲ್ಯಮಾಪನ ಮಾಡುವಲ್ಲಿ ಮತ್ತು ಅನ್ವಯವಾಗುವ ಪರಿಹಾರ ನಿಬಂಧನೆಗಳನ್ನು ಜಾರಿಗೊಳಿಸುವಲ್ಲಿ ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತವು ಪ್ರಮುಖ ಪಾತ್ರ ವಹಿಸುತ್ತವೆ.

ಪ್ರಸರಣ ಗೋಪುರದ ಅಡಿಪಾಯದಿಂದ ನೇರವಾಗಿ ಆಕ್ರಮಿಸಲ್ಪಟ್ಟ ಭೂಮಿಗೆ, ಕರ್ನಾಟಕದ ಅನ್ವಯವಾಗುವ ಸರ್ಕಾರಿ ಚೌಕಟ್ಟು ಬಾಧಿತ ಭೂಮಿಯ ಮೌಲ್ಯದ ಆಧಾರದ ಮೇಲೆ ಪರಿಹಾರವನ್ನು ಒದಗಿಸುತ್ತದೆ. ಪ್ರಸರಣ ಮಾರ್ಗಗಳ ಅಡಿಯಲ್ಲಿರುವ ಹಕ್ಕು-ಮಾರ್ಗ (ಖಿಲಿಜಿ ಛಿಥಿ – ಖಿಂಫ) ಕಾರಿಡಾರ್‌ಗೆ, ಭೂಮಾಲೀಕರು ಸಾಮಾನ್ಯವಾಗಿ ಆಸ್ತಿಯ ಮಾಲೀಕತ್ವವನ್ನು ಉಳಿಸಿಕೊಳ್ಳುತ್ತಾರೆ. ಆದರೆ, ಭೂಮಿಯ ಬಳಕೆಯ ಮೇಲಿನ ನಿರ್ಬಂಧಗಳು ಅಥವಾ ಕಡಿತಕ್ಕೆ ಪರಿಹಾರ ನೀಡಬಹುದು.

ಪ್ರಸರಣ ಮೂಲಸೌಕರ್ಯಕ್ಕೆ ಅನ್ವಯವಾಗುವ ನಿರ್ದಿಷ್ಟ ಪರಿಹಾರ ದರಗಳನ್ನು ಇಂಧನ ಇಲಾಖೆಯು ಹೊರಡಿಸಿದ ಕರ್ನಾಟಕ ಸರ್ಕಾರದ ಆದೇಶಗಳು ನಿಗದಿಪಡಿಸುತ್ತವೆ. ನಿಖರವಾದ ಅನ್ವಯವು ಸಂಬಂಧಪಟ್ಟ ಆದೇಶ, ಯೋಜನೆ ಮತ್ತು ಬಾಧಿತ ಭೂಮಿಯ ಸ್ವರೂಪವನ್ನು ಅವಲಂಬಿಸಿರುತ್ತದೆ. ಪರಿಹಾರ ಪಡೆದಿದ್ದರೂ, ಭೂಮಿಯ ಮಾಲೀಕತ್ವ ರೈತ/ಭೂಮಾಲೀಕರ ಬಳಿಯೇ ಇರುತ್ತದೆ ಮತ್ತು ಅವರು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಭೂಮಿಯನ್ನು ಬಳಸಬಹುದು.

ಪರಿಹಾರವನ್ನು ಯಾರು ಲೆಕ್ಕಹಾಕುತ್ತಾರೆ ಮತ್ತು ಪಾವತಿಸುತ್ತಾರೆ?

ಪರಿಹಾರ ಪ್ರಕ್ರಿಯೆಯನ್ನು ಜಾರಿಗೊಳಿಸುವ ಜವಾಬ್ದಾರಿ ಉಪ ಆಯುಕ್ತರು/ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಕಂದಾಯ ಯಂತ್ರಾಂಗದ್ದಾಗಿದೆ. ಕಂದಾಯ ಅಧಿಕಾರಿಗಳು ಬಾಧಿತ ನಿವೇಶನಗಳನ್ನು ಗುರುತಿಸಿ ಸರ್ವೆ ಮಾಡುತ್ತಾರೆ, ಅನ್ವಯವಾಗುವ ಭೂ ಮೌಲ್ಯವನ್ನು ನಿರ್ಧರಿಸುತ್ತಾರೆ ಮತ್ತು ಸಂಬಂಧಪಟ್ಟ ಸರ್ಕಾರಿ ನಿಬಂಧನೆಗಳ ಅಡಿಯಲ್ಲಿ ಪರಿಹಾರವನ್ನು ಲೆಕ್ಕ ಹಾಕುತ್ತಾರೆ. ಲೆಕ್ಕಹಾಕಿದ ಪರಿಹಾರವನ್ನು ಠೇವಣಿ ಇಡುವ ಜವಾಬ್ದಾರಿ ಪ್ರಸರಣ ಸಂಸ್ಥೆ ಅಥವಾ ಯೋಜನಾ ಅಭಿವರ್ಧಕರದ್ದಾಗಿದೆ. ನಂತರ ಜಿಲ್ಲಾಡಳಿತವು ಅರ್ಹ ಭೂಮಾಲೀಕರಿಗೆ ಪರಿಹಾರ ವಿತರಿಸಲು ಅನುಕೂಲ ಮಾಡಿಕೊಡುತ್ತದೆ. ನಿರ್ಮಾಣದ ಸಮಯದಲ್ಲಿ ಉಂಟಾಗುವ ಬೆಳೆ, ಹಣ್ಣಿನ ಮರ ಮತ್ತು ಮರದ ನಷ್ಟಗಳನ್ನು ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು ಪ್ರತ್ಯೇಕವಾಗಿ ಮೌಲ್ಯಮಾಪನ ಮಾಡುತ್ತವೆ.

ಕರ್ನಾಟಕದಲ್ಲಿ ಪ್ರಸರಣ ಮೂಲಸೌಕರ್ಯಕ್ಕೆ ಪರಿಹಾರವು ಕಂಪನಿ ಮತ್ತು ರೈತರ ನಡುವಿನ ಖಾಸಗಿ ಮಾತುಕತೆಯಾಗಿರುವುದಿಲ್ಲ. ಇದು ಸರ್ಕಾರದಿಂದ ನಿಯಂತ್ರಿಸಲ್ಪಡುವ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುತ್ತದೆ. ಇದರಲ್ಲಿ ನಿಗದಿತ ನಿಯಮಗಳನ್ನು ಅನ್ವಯಿಸುವ ಜವಾಬ್ದಾರಿ ಇಂಧನ ಮತ್ತು ಕಂದಾಯ ಇಲಾಖೆಗಳು ಹಾಗೂ ಜಿಲ್ಲಾಡಳಿತದ್ದಾಗಿದೆ.

ಆ.23ರಂದು ವಿದ್ಯುತ್ ವ್ಯತ್ಯಯ

ತುಮಕೂರು: ಬೆಸ್ಕಾಂ ಗ್ರಾಮೀಣ ಉಪವಿಭಾಗ-2ರ ಹೆಬ್ಬೂರು ಶಾಖಾ ವ್ಯಾಪ್ತಿ ಹೆಬ್ಬೂರು/ತಿಮ್ಮಸಂದ್ರ 66/11 ಕೆ.ವಿ. ವಿದ್ಯುತ್ ಉಪಸ್ಥಾವರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಂಡಿರುವುದರಿಂದ ಆಗಸ್ಟ್ 23ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ನಾಗವಲ್ಲಿ, ಅರಿಯೂರು, ಗಂಗೋನಹಳ್ಳಿ, ಗಳಿಗೇನಹಳ್ಳಿ, ಸಿರಿವರ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

ಆ.24ರಂದು ನೇರ ಉದ್ಯೋಗ ಸಂದರ್ಶನ

ತುಮಕೂರು: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಬೆಂಗಳೂರಿನ ಕೆ.ಎಲ್. ಗ್ರುಪ್(ಅಮೆಜಾನ್) ಹಾಗೂ ಹಿರೇಹಳ್ಳಿ ಪೂರ್ಣಿಮ ಎಂಟರ್‌ಪ್ರೈಸಸ್ ಸಂಸ್ಥೆಯ ಸಹಭಾಗಿತ್ವದಲ್ಲಿ ಪಿಕ್ಕಿಂಗ್, ಪ್ಯಾಕಿಂಗ್, ಸ್ಕ್ಯಾನಿಂಗ್, ಕಸ್ಟಮರ್ ರಿಲೇಷನ್‌ಶಿಪ್ ಆಫೀಸರ್, ವೆಲ್ಡರ್, ಸೆಕ್ಯುರಿಟಿ, ಹೌಸ್ ಕೀಪಿಂಗ್ ಹಾಗೂ ಹೆಲ್ಪರ್ ಹುದ್ದೆಗಳಿಗೆ ಭರ್ತಿ ಮಾಡಲು ಆಗಸ್ಟ್ 24ರಂದು ನೇರ ಉದ್ಯೋಗ ಸಂದರ್ಶನ ನಡೆಯಲಿದೆ. ಎಸ್.ಎಸ್.ಎಲ್.ಸಿ., ಪಿ.ಯು.ಸಿ, ಐ.ಟಿ.ಐ, ಡಿಪ್ಲೊಮಾ ಹಾಗೂ ಯಾವುದೇ ಪದವಿ ಪಾಸಾದ ಅಭ್ಯರ್ಥಿಗಳು ಈ ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ವೇತನ 21,000 ರಿಂದ 27,000 ರೂ.ಗಳವರೆಗೆ ನೀಡಲಾಗುವುದು.

ಅರ್ಹ ಅಭ್ಯರ್ಥಿಗಳು ಆಗಸ್ಟ್ 24ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಡಿ.ಡಿ.ಪಿ.ಐ. ಬಸ್ ನಿಲ್ದಾಣ, ವಾಸನ್ ಕಣ್ಣಿನ ಆಸ್ಪತ್ರೆಹತ್ತಿರ, ಮೂಲೆಮನೆ ಹೋಟಲ್ ಪಕ್ಕ, ಸೋಮೇಶ್ವರಪುರಂ, 14ನೇ ಕ್ರಾಸ್, ತುಮಕೂರು-572102 ಇಲ್ಲಿ ಬಯೋಡೇಟಾದೊಂದಿಗೆ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0816-2278488, ಮೊ.ಸಂ. 8792669410, 7760174554ನ್ನು ಸಂಪರ್ಕಿಸಬೇಕೆಂದು ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಬೇಡ್ಕರ್ ಅವರ ವಿಚಾರಧಾರೆಗಳು ಎಲ್ಲ ವರ್ಗದ ಜನರಿಗೂ ಅನ್ವಯ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಸಂವಿಧಾನ ಶಿಲ್ಪಿ ಡಾ: ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳು ಎಲ್ಲ ವರ್ಗದ ಜನರಿಗೂ ಅನ್ವಯವಾಗುತ್ತದೆ ಎಂದು ಡಾ: ಮೂರ್ತಿ ತಿಮ್ಮನಹಳ್ಳಿ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗುಬ್ಬಿ ತಾಲ್ಲೂಕು ಘಟಕದ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಗುಬ್ಬಿ ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಬುಧವಾರ ಗುಬ್ಬಿ ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ ಭಾರತರತ್ನ ಡಾ: ಬಿ.ಆರ್. ಅಂಬೇಡ್ಕರ್ ಓದು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಬಾಬಾ ಸಾಹೇಬ ಅಂಬೇಡ್ಕರ್ ಅವರ ಆಲೋಚನೆ ಮತ್ತು ಹೋರಾಟಗಳನ್ನು ಯಾವುದೇ ಒಂದು ಜಾತಿ, ಧರ್ಮ, ಭಾಷೆ ಹಾಗೂ ಪ್ರದೇಶಗಳಿಗೆ ಸೀಮಿತಗೊಳಿಸುವ ಮನೋಭಾವದಿಂದ ನಾವೆಲ್ಲ ಹೊರಬರಬೇಕು ಎಂದು ಹೇಳಿದರು.

ಬಾಬಾಸಾಹೇಬ ಅಂಬೇಡ್ಕರ್ ಅವರ ವಿಚಾರಧಾರೆಗಳು ಕೇವಲ ದಲಿತರು ಹಾಗೂ ಅಸ್ಪೃಶ್ಯರಿಗೆ ಸೀಮಿತವಾಗಿಲ್ಲ. ಭಾರತದ ಎಲ್ಲ ವರ್ಗದ ಮಹಿಳೆಯರು ಸೇರಿದಂತೆ ಎಲ್ಲ ಜಾತಿ ಮತ್ತು ಧರ್ಮದ ಜನರ ಹಕ್ಕುಗಳಿಗೆ ಅನ್ವಯವಾಗುವ ಸಂವಿಧಾನವನ್ನು ರಚಿಸುವ ಮೂಲಕ ಅವರು ಭಾರತದ ಭಾಗ್ಯವಿಧಾತರಾಗಿದ್ದಾರೆ ಎಂದು ತಿಳಿಸಿದರು.

ಪ್ರಧಾನ ಉಪನ್ಯಾಸ ನೀಡಿದ ಡಾ: ಕೊಟ್ಟಶಂಕರ್ ಅವರು ಅಂಬೇಡ್ಕರ್ ಅವರ ವಿಚಾರಧಾರೆಗಳ ಪ್ರಸ್ತುತತೆ, ಸಂವಿಧಾನ ರಚನೆಯಲ್ಲಿ ಅವರು ವಹಿಸಿದ ಪ್ರಮುಖ ಪಾತ್ರ, ಸಂವಿಧಾನ ರಚನಾ ಸಮಿತಿಯ ಮಹಿಳಾ ಸದಸ್ಯರ ಕೊಡುಗೆ ಹಾಗೂ ಅಂಬೇಡ್ಕರ್ ಅವರು ಮಂಡಿಸಿದ್ದ ಹಿಂದೂ ಕೋಡ್ ಬಿಲ್‌ಗೆ ಎದುರಾದ ಹಿನ್ನಡೆ ಮತ್ತು ಅದರ ಹಿನ್ನೆಲೆಯಲ್ಲಿ ಅವರು ನೀಡಿದ ರಾಜೀನಾಮೆ ಕುರಿತು ವಿವರಿಸಿದರಲ್ಲದೆ ಮೀಸಲಾತಿ ಕುರಿತು ಸಮಾಜದಲ್ಲಿರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ಅಗತ್ಯವಿದೆ. ಮೀಸಲಾತಿಯ ಹಂಚಿಕೆ ಮತ್ತು ಅದರ ಸಂವಿಧಾನಾತ್ಮಕ ಹಿನ್ನೆಲೆಯನ್ನು ವಿದ್ಯಾರ್ಥಿಗಳು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ವಾಸ್ತವಾಂಶಗಳನ್ನು ಮರೆಮಾಚುವ ಮೀಸಲಾತಿ ವಿರೋಧಿ ಅಭಿಪ್ರಾಯಗಳಿಗೆ ಸೂಕ್ತ ಉತ್ತರ ನೀಡುವಷ್ಟು ಜ್ಞಾನವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಈಶ್ವರ ಕು. ಮಿರ್ಜಿ ಮಾತನಾಡಿ, ಯುವಕರು ಹಾಗೂ ವಿದ್ಯಾರ್ಥಿಗಳಲ್ಲಿ ಸಂವಿಧಾನಾತ್ಮಕ ಮೀಸಲಾತಿ ಕುರಿತು ಸ್ಪಷ್ಟ ಅರಿವು ಮೂಡಿಸುವ ಅಗತ್ಯವಿದೆ. ಇದರಿಂದ ಮೀಸಲಾತಿ ಕುರಿತು ಇರುವ ಪೂರ್ವಾಗ್ರಹಗಳು ದೂರವಾಗಲಿವೆ. ಸಾಮಾಜಿಕ ಮಾಧ್ಯಮಗಳಲ್ಲಿ ಮೀಸಲಾತಿ ಕುರಿತು ಹರಡುತ್ತಿರುವ ತಪ್ಪು ಕಲ್ಪನೆಗಳು ಸಮಾಜದಲ್ಲಿ ಗೊಂದಲ ಮೂಡಿಸುತ್ತಿದ್ದು, ಪ್ರತಿಯೊಂದು ಶಾಲಾ-ಕಾಲೇಜುಗಳಲ್ಲಿಯೂ ಅಂಬೇಡ್ಕರ್ ಓದು, ಸಂವಿಧಾನ ಮತ್ತು ಮೀಸಲಾತಿ ಕುರಿತ ಕಾರ್ಯಕ್ರಮಗಳು ನಡೆಯಬೇಕೆಂದು ತಿಳಿಸಿದರು.

ವಿಶೇಷವಾಗಿ ಕಾಲೇಜಿನ ವಿದ್ಯಾರ್ಥಿನಿಯರು ಸಂವಿಧಾನದ ಪೀಠಿಕೆಯನ್ನು ಓದುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ ಗುಬ್ಬಿ ಶಾಖೆಯ ಅಧ್ಯಕ್ಷ ಯತೀಶ್ ಹೆಚ್.ಸಿ. ಸ್ವಾಗತಿಸಿದರು. ಕಾಲೇಜಿನ ಪ್ರಾಚಾರ್ಯ ಮಂಜುನಾಥ ಎಂ.ಕೆ. ಅಧ್ಯಕ್ಷತೆವಹಿಸಿದ್ದರು. ಉಪನ್ಯಾಸಕಿ ಅಂಬಿಕಾ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಉಪನ್ಯಾಸಕ ದೊಡ್ಡಯ್ಯ ಹೆಚ್.ಎನ್. ಕಾರ್ಯಕ್ರಮ ನಿರೂಪಿಸಿದರು. ಕಾಲೇಜಿನ ಉಪನ್ಯಾಸಕ ವರ್ಗದವರು ಉಪಸ್ಥಿತರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಕುಣಿಗಲ್ ತಾಲ್ಲೂಕಿನಲ್ಲಿ ವಿದ್ಯುತ್ ವ್ಯತ್ಯಯ

ಕುಣಿಗಲ್: 220/66ಕೆ.ವಿ ಅಂಚೇಪಾಳ್ಯ ಸ್ವೀಕರಣಾ ಕೇಂದ್ರದ ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಕುಣಿಗಲ್, ಅಂಚೇಪಾಳ್ಯ, ಯಡಿಯೂರು, ಸಂತೇಮಾವತ್ತೂರು, ಅಮೃತ್ತೂರು, ಸಣಬಘಟ್ಟ, ಯಡವಾಣಿ, ಜಿಡ್ಡಿಗೆರೆ, ಚೌಡನಕುಪ್ಪೆ, ಭಕ್ತರಹಳ್ಳಿ, ವಿಜಯ ಸ್ಟೀಲ್ಸ್ ವಿದ್ಯುತ್ ಉಪಕೇಂದ್ರಗಳ ಒಳಪಡುವ ಗ್ರಾಮ/ನಗರ/ಕೈಗಾರಿಕಾ ಪ್ರದೇಶಗಳಿಗೆ ದಿನಾಂಕ:23.08.2026ರ ಬೆಳಗ್ಗೆ 9:00ಘಿ ಇಂದ 18:00ಘಿ ವರೆಗೂ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಗ್ರಾಹಕರು ಸಹಕರಿಸಬೇಕೆಂದು ಕುಣಿಗಲ್ ಬೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ಆರ್.ಪುರುಷೋತ್ತಮ ತಿಳಿಸಿದ್ದಾರೆ.

ಸ್ವಾತಂತ್ರ್ಯೋತ್ಸವದ ಅಂಗವಾಗಿ 2 ದಿನಗಳ ನಾಟಕೋತ್ಸವ

ಸೂರ್ಯಪ್ರಗತಿನ್ಯೂಸ್.ಕಾಂ



80ನೇ ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಅಸೀಮ ರಂಗತಂಡದಿಂದ 2 ದಿನಗಳ ನಾಟಕೋತ್ಸವ

ಅಸೀಮ ರಂಗತಂಡವು ಕಳೆದ ಕೆಲವು ವರ್ಷಗಳಿಂದ ನಾಟಕಗಳು, ವಿಚಾರ ಸಂಕಿರಣಗಳು, ಕಾರ್ಯಾಗಾರಗಳು, ಹೀಗೆ ಹಲವಾರು ರೀತಿಯರಂಗ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

ಅದರ ಮುಂದುವರಿದ ಭಾಗವಾಗಿ 80ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ 2 ದಿನಗಳ ನಾಟಕೋತ್ಸವವನ್ನು ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಸಂಕೇನಹಳ್ಳಿಯಲ್ಲಿ ದಿನಾಂಕ 25-08-2026 ಮತ್ತು 26-08-2026ರಂದು ಸಂಜೆ 6.30ಕ್ಕೆ ಹಮ್ಮಿಕೊಳ್ಳಲಾಗಿದೆ.

ದಿನಾಂಕ 25-08-2026ರ ಮಂಗಳವಾರ ಸಂಜೆ 6.30ಕ್ಕೆ ಗುರು ಶಿಷ್ಯರು ನಾಟಕ ಪ್ರದರ್ಶನ ನಡೆಯಲಿದೆ. ದಿನಾಂಕ 26-08-2026ರ ಬುಧವಾರ ಸಂಜೆ 6.30ಕ್ಕೆ ಕಲಿಯುಗ ಬಬ್ರುವಾಹನ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಈ ಎರಡೂ ನಾಟಕಗಳನ್ನು ರಾಘವೇಂದ್ರ ಎಸ್.ರವರು ನಿರ್ದೇಶನ ಮಾಡಲಿದ್ದಾರೆ.ಈ ಕಾರ್ಯಕ್ರಮಕ್ಕೆ ಕಲಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೋರಿಕೊಳ್ಳುತ್ತೇವೆ.

ಶೈಲಾಪುರ ಗ್ರಾಮದ ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಅವ್ಯವಸ್ಥೆ;

ಸೂರ್ಯಪ್ರಗತಿನ್ಯೂಸ್.ಕಾಂ



ಪಾವಗಡ: ತಾಲೂಕಿನ ಶೈಲಾಪುರ ಗ್ರಾಮದ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಸಮರ್ಪಕವಾಗಿ ಕಾರ್ಯನಿರ್ವಹಿಸದ ಕಾರಣ ಗ್ರಾಮಸ್ಥರು ಪರದಾಡುವಂತಾಗಿದೆ. ಈ ಬಗ್ಗೆ ಸ್ಥಳೀಯರಾದ ಮಂಜುನಾಥ್ ಅವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಮಾಡಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈರಲ್ ಆಗಿದೆ.

ವಿಡಿಯೋದಲ್ಲಿ ಮಂಜುನಾಥ್ ಅವರು, ನಮ್ಮ ಗ್ರಾಮದಲ್ಲಿ ಆಸ್ಪತ್ರೆ ಇದ್ದರೂ ಇಲ್ಲದಂತಾಗಿದೆ. ಆರೋಗ್ಯ ಸಮಸ್ಯೆ ಇದ್ದರೆ ಕೆ.ಟಿ.ಹಳ್ಳಿ, ಕೋಟಗುಡ್ಡ ಅಥವಾ ಪಾವಗಡ ಪಟ್ಟಣಕ್ಕೆ ಹೋಗಿ ಚಿಕಿತ್ಸೆ ಪಡೆಯುವ ಪರಿಸ್ಥಿತಿ ಇದೆ. ಈ ಆಸ್ಪತ್ರೆ ಯಾವಾಗ ತೆರೆಯುತ್ತದೆ, ಯಾವಾಗ ಬಂದ್ ಇರುತ್ತದೆ ಎಂಬುದೇ ನಮಗೆ ಗೊತ್ತಿಲ್ಲ ಎಂದು ಅಳಲು ತೋಡಿಕೊಂಡಿದ್ದಾರೆ.

ಅವರು ಸ್ಥಳಕ್ಕೆ ತೆರಳಿ ಚಿತ್ರೀಕರಿಸಿದ ದೃಶ್ಯಗಳಲ್ಲಿ ಆಸ್ಪತ್ರೆಯ ಸುತ್ತಮುತ್ತ ಕಳೆಗಳು ಬೆಳೆದಿದ್ದು, ಆವರಣದಲ್ಲಿ ಬಿಯರ್ ಬಾಟಲ್‌ಗಳು ಎಸೆದಿರುವುದು ಕಂಡುಬಂದಿದೆ. ಮೂಲಭೂತ ನಿರ್ವಹಣೆಯೇ ಇಲ್ಲದಂತಾಗಿದೆ ಎಂದು ಅವರು ವಿಡಿಯೋದಲ್ಲಿ ಆರೋಪಿಸಿದ್ದಾರೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಹಾಸ್ಪಟಲ್ ಕಡೆ ಗಮನಹರಿಸಿ ನಮಗೆ ಅನುಕೂಲ ಮಾಡಿಕೊಡಿ ಸ್ವಾಮಿ ಎಂದು ಮಂಜುನಾಥ್ ಅವರು ವಿಡಿಯೋ ಮೂಲಕ ಮನವಿ ಮಾಡಿದ್ದಾರೆ.

ಗ್ರಾಮದಲ್ಲಿ ಸರ್ಕಾರಿ ಆರೋಗ್ಯ ಕೇಂದ್ರ ಇದ್ದರೂ ಸಿಬ್ಬಂದಿ, ಸಮಯದ ಮಾಹಿತಿ ಮತ್ತು ಮೂಲ ಸೌಲಭ್ಯಗಳ ಕೊರತೆಯಿಂದಾಗಿ ಗ್ರಾಮಸ್ಥರು ಸಣ್ಣಪುಟ್ಟ ಆರೋಗ್ಯ ಸಮಸ್ಯೆಗೂ 10-15 ಕಿ.ಮೀ ದೂರದ ಕೆ.ಟಿ.ಹಳ್ಳಿ, ಕೋಟಗುಡ್ಡ ಅಥವಾ ಪಾವಗಡ ಪಟ್ಟಣಕ್ಕೆ ಹೋಗಬೇಕಾದ ಅನಿವಾರ್ಯತೆ ಎದುರಾಗಿದೆ. ಇದರಿಂದ ವಯಸ್ಸಾದವರು ಮತ್ತು ಬಡ ಕುಟುಂಬಗಳಿಗೆ ಹೆಚ್ಚಿನ ತೊಂದರೆಯಾಗುತ್ತಿದೆ.

ಈ ವಿಡಿಯೋ ವೈರಲ್ ಆದ ಬೆನ್ನಲ್ಲೇ ಸ್ಥಳೀಯರು ಸಾಮಾಜಿಕ ಜಾಲತಾಣದಲ್ಲಿ ಆರೋಗ್ಯ ಇಲಾಖೆ ಕ್ರಮಕ್ಕೆ ಒತ್ತಾಯಿಸಿದ್ದಾರೆ. ಈ ಬಗ್ಗೆ ತಾಲೂಕು ಆರೋಗ್ಯಾಧಿಕಾರಿಗಳು ಮತ್ತು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ, ಕೇಂದ್ರದ ಕಾರ್ಯಾವಧಿ ನಿಗದಿಪಡಿಸಿ, ಸಿಬ್ಬಂದಿ ನಿಯೋಜನೆ ಹಾಗೂ ಆವರಣ ಸ್ವಚ್ಛತೆಗೆ ಕ್ರಮ ಕೈಗೊಳ್ಳಬೇಕು ಎಂಬುದು ಗ್ರಾಮಸ್ಥರ ಒತ್ತಾಯವಾಗಿದೆ.

ಶೂಟೌಟ್ ಪ್ರಕರಣದ ಕುಟುಂಬಕ್ಕೆ ಸೂಕ್ತ ಪರಿಹಾರಕ್ಕಾಗಿ 24 ರಂದು ಪ್ರಗತಿಪರ ಸಂಘಟನೆಯಿಂದ ಪ್ರತಿಭಟನೆ

ಸೂರ್ಯಪ್ರಗತಿನ್ಯೂಸ್.ಕಾಂ

ಕೊಳ್ಳೇಗಾಲ ; ಹನೂರು ಶೂಟೌಟ್ ಪ್ರಕರಣದಲ್ಲಿ ಸಾವಿಗೀಡಾದವರ ಕುಟುಂಬಕ್ಕೆ ಸೂಕ್ತ ಪರಿಹಾರ ಒದಗಿಸಬೇಕೆಂದು ಒತ್ತಾಯಿಸಿ ಕೊಳ್ಳೇಗಾಲದಲ್ಲಿ ಇದೇ ತಿಂಗಳ 24 ರಂದು ವಿವಿಧ ಪ್ರಗತಿಪರ ಸಂಘಟನೆಯ ವತಿಯಿಂದ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಯಕರ್ನಾಟಕ ಜನಪರ ವೇದಿಕೆಯ ಜಿಲ್ಲಾಧ್ಯಕ್ಷ ಜಕಾವುಲ್ಲಾ ಅವರು ತಿಳಿಸಿದರು .

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಜಯಕರ್ನಾಟಕ ಜನಪರ ವೇದಿಕೆಯ ಜಿಲ್ಲಾಧ್ಯಕ್ಷ ಜಕಾವುಲ್ಲ ಮಾತನಾಡಿ ಆ.15 ರಂದು ಹನೂರಿನ ತೋಮಿಯರ್ ಪಾಳ್ಯ ಅರಣ್ಯ ಪ್ರದೇಶದಲ್ಲಿ ನಡೆದ ಶೂಟೌಟ್ ಪ್ರಕರಣದ ವಿಚಾರಣೆಯನ್ನು ಸಿಬಿಐ ತನಿಖೆಗೆ ವಹಿಸಬೇಕು ಜೊತೆಗೆ ಮೃತರ ಕುಟುಂಬಗಳಿಗೆ ಸೂಕ್ತ ನ್ಯಾಯ ಕೊಡಬೇಕೆಂಬ ನಿಟ್ಟಿನಲ್ಲಿ ಆ.24 ರಂದು ಹೋರಾಟ ಹಮ್ಮಿಕೊಂಡಿದ್ದೇವೆ. ಪಟ್ಟಣದ ಗಣೇಶ ದೇವಸ್ಥಾನದಿಂದ ಹೊರಟು ಪ್ರಮುಖ ರಸ್ತೆಗಳಲ್ಲಿ ಪ್ರತಿಭಟನೆ ನಡೆಸುವ ಮೂಲಕ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು



ತೋಮಿಯರ್ ಪಾಳ್ಯ ಅರಣ್ಯ ಪ್ರದೇಶದಲ್ಲಿ ಶೂಟ್ ಔಟ್ ಕೃತ್ಯ ಇದು ಅಮಾನವೀಯ ಕೃತ್ಯವಾಗಿದೆ ಹಸುಗಳನ್ನು ಹುಡುಕಿಕೊಂಡು ಅರಣ್ಯಕ್ಕೆ ಹೋದ ರೈತರನ್ನು ಭೇಟೆಗಾರರು ಎಂದು ಅನುಮಾನಿಸಿ ಹತ್ಯಮಾಡಿರುವುದು ಅರಣ್ಯ ಕಾಯಿದೆಯ ಹೆಸರಿನಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳು ಮಾನವ ಹಕ್ಕುಗಳ ಉಲ್ಲಂಘನೆ ಮಾಡಿದ್ದಾರೆ ಆದ್ದರಿಂದ ಶೂಟೌಟ್ ಮಾಡಿದ ಅರಣ್ಯ ಇಲಾಖೆ ವಾಚರ್ ಹಾಗೂ ಗಾರ್ಡ್ ಗಳಿಗೆ ತಕ್ಕ ಶಿಕ್ಷೆಯಾಗಬೇಕು, ಅವರನ್ನು ವೃತ್ತಿಯಿಂದ ವಜಾಗೊಳಿಸಬೇಕು ಎಂದು ಜಯಕರ್ನಾಟಕ ಜನಪರ ವೇದಿಕೆ ಒತ್ತಾಯಿಸುತ್ತದೆ ಎಂದು ತಿಳಿಸಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಶೈಲೇಂದ್ರ ಮಾತನಾಡಿ, ಆ.15 ರಂದು ಹನೂರಿನ ಅರಣ್ಯದಲ್ಲಿ ನಡೆದ ಶೂಟೌಟ್ ದಲ್ಲಿ ಸಾವನ್ನಪ್ಪಿದವ ಕುಟುಂಬದವರಿಗೆ ಎರಡು ಕೋಟಿ ಪರಿಹಾರ, ಐದು ಎಕರೆ ಜಮೀನು ನೀಡಬೇಕು, ಕುಟುಂಬಕ್ಕೆ ಸರ್ಕಾರಿ ಹುದ್ದೆ, ಮಕ್ಕಳ ಶಿಕ್ಷಣಕ್ಕೆ ಎಲ್ಲಾ ಸವಲತ್ತು ಒದಗಿಸಬೇಕು. ಶೂಟೌಟ್ ನಡೆಸಿದ್ದವರನ್ನು ಕೆಲಸದಿಂದ ವಜಾಗೊಳಿಸಬೇಕು ಎಂದು ಪ್ರತಿಭಟನೆಯನ್ನು ನಡೆಸಲಾಗುವುದು ಎಂದು ತಿಳಿಸಿದರು.

ಪ್ರಜಾವಿಮೋಚನಾ ಸಮಿತಿ ಸಾಮಾಜಿಕ ನ್ಯಾಯ ಸಂಘ ವಿಭಾಗೀಯ ಅಧ್ಯಕ್ಷ ಕೆಸ್ತೂರು ಸಿದ್ದರಾಜು ಮಾತನಾಡಿ, ಶೂಟೌಟ್ ಪ್ರಕರಣದಲ್ಲಿ ಸಾವನ್ನಪ್ಪಿದ್ದ ಕುಟುಂಬದವರಿಗೆ ತಲಾ ಹತ್ತು ಲಕ್ಷ ರೂ.ನ್ನು ತಮಿಳುನಾಡಿನ ಮುಖ್ಯಮಂತ್ರಿ ಜೋಸೆಫ್ ವಿಜಯ್ ನೀಡುತ್ತಿರುವುದನ್ನು ನಾವು ಸ್ವಾಗತ ಮಾಡುತ್ತೇವೆ. ಇದರ ಜೊತೆಗೆ ಕರ್ನಾಟಕದಲ್ಲಿ ತಮಿಳರ ಮೇಲೆ ಕನ್ನಡಿಗರು ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಹೇಳಿರುವುದನ್ನು ನಾವು ಖಂಡಿಸುತ್ತೇವೆ. ಆದ್ದರಿಂದ ಭಾಷಾ ದ್ವೇಷವನ್ನು ಬಿತ್ತುವುದನ್ನು ಬಿಟ್ಟು ನಿಮ್ಮ ಹೇಳಿಕೆಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಯಕರ್ನಾಟಕ ಜನಪರ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಮಹಾಜನ್, ಜಿಲ್ಲಾ ಉಪಾಧ್ಯಕ್ಷರು ಶ್ರೀನಿವಾಸ್ ರಾವ್, ಚಂದ್ರಶೇಖರ್. ಎಸ್, ಸದಸ್ಯರು ಸುಂದರ್, ರೈತ ಸಂಘದ ರಾಜ್ಯ ಕಾರ್ಯದರ್ಶಿ ಸಾಲೊಮನ್, ತಾಲ್ಲೂಕು ಅಧ್ಯಕ್ಷ ಮೋಳೆ ರಾಜು, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಪೆರಿಯಾನಾಯಗಂ, ಜಿಲ್ಲಾ ಕಾರ್ಯಾಧ್ಯಕ್ಷ ವಸಂತ್ ಕುಮಾರ್, ಲಾರೆನ್ಸ್, ಪ್ರಜಾವಿಮೋಚನಾ ಸಮಿತಿ ಸಾಮಾಜಿಕ ನ್ಯಾಯ ಸಂಘ ವಿಭಾಗೀಯ ಹನೂರು ತಾಲ್ಲೂಕು ಅಧ್ಯಕ್ಷ ಮಹಾಲಿಂಗಯ್ಯ, ರಾಮಪುರ ಹೊಬಳಿ

SP NEWS ಸಣ್ ಸುದ್ದಿ



ರಾಮನಗರ, : ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಅಂಗಡಿ ತೆರವು ಕಾರ್ಯಾಚರಣೆಗೆ ವ್ಯಾಪಾರಿಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಯಾವುದೇ ಪೂರ್ವ ಮಾಹಿತಿ ಅಥವಾ ನ್ಯಾಯಾಲಯದ ಆದೇಶವಿಲ್ಲದೆ ತಮ್ಮ ಅಂಗಡಿಗಳನ್ನು ತೆರವುಗೊಳಿಸಲಾಗುತ್ತಿದೆ ಎಂದು ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಮ್ಮ ಜೀವನೋಪಾಯದ ಬಗ್ಗೆ ಕಳವಳ ವ್ಯಕ್ತಪಡಿಸಿ, ಕೋರ್ಟ್ ಆದೇಶ ತೋರಿಸುವಂತೆ ಒತ್ತಾಯಿಸಿದ್ದಾರೆ. ಇದು ಸ್ಥಳದಲ್ಲಿ ಕೋಲಾಹಲಕ್ಕೆ ಕಾರಣವಾಗಿದೆ.


“ಒಂಟೆ ಎಷ್ಟೇ ಉದ್ದವಾಗಿದ್ದರೂ, ಆಹಾರ ತಿನ್ನಲು ತಲೆ ಬಾಗಲೇಬೇಕು.”

ಸೂರ್ಯಪ್ರಗತಿನ್ಯೂಸ್.ಕಾಂ

ಈ ಒಂದು ಮಾತಿನಲ್ಲೇ ಜೀವನದ ಬಹುದೊಡ್ಡ ಸತ್ಯ ಅಡಗಿದೆ. ಒಂಟೆ ತನ್ನ ಎತ್ತರದ ಕಾರಣದಿಂದ ಇತರ ಪ್ರಾಣಿಗಳಿಗಿಂತ ಭಿನ್ನವಾಗಿ ಕಾಣಬಹುದು. ಆದರೆ ಹೊಟ್ಟೆ ತುಂಬಿಸಿಕೊಳ್ಳಲು ಅದು ನೆಲದತ್ತ ತಲೆ ಬಾಗಲೇಬೇಕು. ಅದರ ಎತ್ತರವು ಆಹಾರದ ಮುಂದೆ ಅಡ್ಡಿಯಾಗುವುದಿಲ್ಲ; ಬದಲಾಗಿ ಬದುಕಿಗಾಗಿ ತಲೆ ಬಾಗುವುದು ಅನಿವಾರ್ಯವಾಗುತ್ತದೆ.

ಅದೇ ರೀತಿ ಮನುಷ್ಯ ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ, ಎಷ್ಟೇ ಹಣ, ಅಧಿಕಾರ, ಜ್ಞಾನ ಅಥವಾ ಪ್ರಭಾವ ಹೊಂದಿದ್ದರೂ ಜೀವನದ ಕೆಲವು ಸಂದರ್ಭಗಳಲ್ಲಿ ತಲೆ ಬಾಗಲೇಬೇಕಾಗುತ್ತದೆ. ಅಹಂಕಾರ ಶಾಶ್ವತವಲ್ಲ; ಅದು ಎಷ್ಟೇ ಎತ್ತರಕ್ಕೆ ಏರಿದರೂ ಒಂದಲ್ಲ ಒಂದು ದಿನ ಅಂತ್ಯ ಕಾಣಲೇಬೇಕು.

ಅಹಂಕಾರ ಮನುಷ್ಯನನ್ನು ಎತ್ತರಕ್ಕೆ ಕೊಂಡೊಯ್ಯುವುದಿಲ್ಲ ಕೆಲವೊಮ್ಮೆ ಮನುಷ್ಯನಿಗೆ ಹಣ ಬಂದಾಗ, ಅಧಿಕಾರ ಸಿಕ್ಕಾಗ, ಜನರ ಗೌರವ ದೊರೆತಾಗ ಅಥವಾ ತನ್ನ ಸುತ್ತಲೂ ಜನರು ಸೇರುತ್ತಿದ್ದಾಗ, “ನನ್ನಷ್ಟು ದೊಡ್ಡವರು ಯಾರೂ ಇಲ್ಲ” ಎಂಬ ಭಾವನೆ ಮೂಡುತ್ತದೆ. ಆಗ ಅವನು ತನ್ನಿಗಿಂತ ಕೆಳಗಿನವರನ್ನು ಕೀಳಾಗಿ ಕಾಣಲು ಪ್ರಾರಂಭಿಸುತ್ತಾನೆ.ಆದರೆ ಕಾಲ ಯಾರಿಗೂ ಒಂದೇ ರೀತಿಯಾಗಿ ಇರುವುದಿಲ್ಲ.ಇಂದು ನಮ್ಮ ಮುಂದೆ ಸಹಾಯ ಕೇಳುವ ವ್ಯಕ್ತಿ, ನಾಳೆ ನಮಗೆ ಸಹಾಯ ಮಾಡುವ ಸ್ಥಾನದಲ್ಲಿರಬಹುದು. ಇಂದು ನಮ್ಮನ್ನು ಗೌರವಿಸುವ ವ್ಯಕ್ತಿ, ನಾಳೆ ನಮ್ಮಿಂದ ದೂರವಾಗಬಹುದು. ಇಂದು ನಮ್ಮ ಕೈಯಲ್ಲಿರುವ ಅಧಿಕಾರ, ನಾಳೆ ಬೇರೆಯವರ ಕೈಗೆ ಹೋಗಬಹುದು. ಅದಕ್ಕಾಗಿಯೇ ಸ್ಥಾನ ಶಾಶ್ವತವಲ್ಲ, ಅಧಿಕಾರ ಶಾಶ್ವತವಲ್ಲ, ಹಣ ಶಾಶ್ವತವಲ್ಲ; ಆದರೆ ನಾವು ತೋರಿದ ಮಾನವೀಯತೆ ಮಾತ್ರ ಜನರ ಹೃದಯದಲ್ಲಿ ಉಳಿಯುತ್ತದೆ. ಒಂದು ಸರಳ ಉದಾಹರಣೆ ಒಬ್ಬ ದೊಡ್ಡ ಅಧಿಕಾರಿಯಿದ್ದ. ತನ್ನ ಅಧಿಕಾರದ ಮೇಲೆ ಅವನಿಗೆ ಅಪಾರ ಹೆಮ್ಮೆ. ಕಚೇರಿಗೆ ಬರುವ ಸಾಮಾನ್ಯ ಜನರನ್ನು ಗೌರವದಿಂದ ಮಾತನಾಡಿಸದೆ, “ನಾನು ಅಧಿಕಾರಿ, ನೀವು ಸಾಮಾನ್ಯ ಜನ” ಎಂಬ ಮನೋಭಾವದಿಂದ ವರ್ತಿಸುತ್ತಿದ್ದ.ಕಾಲ ಕಳೆದಂತೆ ಅವನ ನಿವೃತ್ತಿಯ ದಿನ ಬಂತು. ಅಧಿಕಾರದ ಕುರ್ಚಿ ಹೋಯಿತು. ಕಚೇರಿಯಲ್ಲಿ ಅವನ ಮಾತಿಗೆ ಕಾಯುತ್ತಿದ್ದ ಜನರೂ ಬೇರೆಯಾದರು. ಆಗ ಅವನಿಗೆ ಅರಿವಾಯಿತು ತಾನು ದೊಡ್ಡವನು ಎಂದುಕೊಂಡಿದ್ದು ತನ್ನ ವ್ಯಕ್ತಿತ್ವದಿಂದಲ್ಲ, ತನ್ನ ಕುರ್ಚಿಯಿಂದ ಎಂಬ ಸತ್ಯ. ಇದೇ ಜೀವನದ ಪಾಠ.



ಪ್ರಕೃತಿಯೇ ನಮಗೆ ಪಾಠ ಕಲಿಸುತ್ತದೆ ಎತ್ತರದ ಮರಕ್ಕೂ ಬೇರು ನೆಲದಲ್ಲೇ ಇರುತ್ತದೆ. ಎಷ್ಟೇ ದೊಡ್ಡ ನದಿಯಾದರೂ ಅದು ಸಮುದ್ರವನ್ನು ಸೇರುವಾಗ ತನ್ನ ಅಸ್ತಿತ್ವವನ್ನು ವಿಶಾಲ ಪ್ರಕೃತಿಯ ಮುಂದೆ ಸಮರ್ಪಿಸುತ್ತದೆ. ಎಷ್ಟೇ ದೊಡ್ಡ ಪರ್ವತವಾಗಿದ್ದರೂ ಕಾಲದ ಮುಂದೆ ಬದಲಾವಣೆಗೆ ಒಳಗಾಗುತ್ತದೆ. ಹಾಗೆಯೇ ಮನುಷ್ಯ ಎಷ್ಟೇ ಎತ್ತರಕ್ಕೆ ಏರಿದರೂ ವಿನಯವನ್ನು ಕಳೆದುಕೊಳ್ಳಬಾರದು.

ತಲೆ ಬಾಗುವುದು ಸೋಲಿನ ಸಂಕೇತವಲ್ಲ. ಅಗತ್ಯವಿದ್ದಾಗ ತಲೆ ಬಾಗುವುದು ಜ್ಞಾನದ ಸಂಕೇತ. ತಪ್ಪಾದಾಗ ಕ್ಷಮೆ ಕೇಳುವುದು ದೌರ್ಬಲ್ಯವಲ್ಲ; ಅದು ವ್ಯಕ್ತಿತ್ವದ ಶಕ್ತಿ.ಒಂಟೆ ಎಷ್ಟೇ ಉದ್ದವಾಗಿದ್ದರೂ ಆಹಾರ ತಿನ್ನಲು ತಲೆ ಬಾಗಲೇಬೇಕು.ಅದೇ ರೀತಿ ಮನುಷ್ಯ ಎಷ್ಟೇ ದೊಡ್ಡವನಾದರೂ ಜೀವನದ ಮುಂದೆ ಒಂದಲ್ಲ ಒಂದು ದಿನ ತಲೆ ಬಾಗಲೇಬೇಕು. ಆದ್ದರಿಂದ ನಮ್ಮ ಎತ್ತರವನ್ನು ಅಹಂಕಾರದಲ್ಲಿ ತೋರಿಸಿಕೊಳ್ಳುವುದಕ್ಕಿಂತ, ನಮ್ಮ ಎತ್ತರವನ್ನು ಇತರರನ್ನು ಮೇಲಕ್ಕೆತ್ತಲು ಬಳಸೋಣ. ಅಹಂಕಾರದಿಂದ ಎತ್ತರಕ್ಕೆ ಏರಿದವನು ಒಂದು ದಿನ ಕೆಳಗೆ ಬೀಳಬಹುದು;ವಿನಯದಿಂದ ಬದುಕಿದವನು ಬಿದ್ದರೂ ಜನರ ಕೈ ಹಿಡಿದು ಮತ್ತೆ ಎದ್ದು ನಿಲ್ಲಬಹುದು. ಕೆಲವರು ತಮ್ಮ ಬಳಿ ಇರುವ ಹಣ, ಅಧಿಕಾರ ಅಥವಾ ಸ್ಥಾನವನ್ನು ತೋರಿಸಿಕೊಳ್ಳುವುದಕ್ಕಿಂತ, ತಮ್ಮ ಮಾತಿನಿಂದಲೇ ನೋವಿನಲ್ಲಿರುವವರ ಮನಸ್ಸಿಗೆ ಧೈರ್ಯ ತುಂಬುತ್ತಾರೆ. ಕಷ್ಟದಲ್ಲಿರುವ ಒಬ್ಬ ವ್ಯಕ್ತಿಗೆ “ನೀನು ಒಂಟಿಯಲ್ಲ, ನಾನು ನಿನ್ನ ಜೊತೆ ಇದ್ದೇನೆ” ಎಂಬ ಒಂದು ಮಾತು ಕೂಡ ದೊಡ್ಡ ಸಹಾಯವಾಗಬಹುದು.

ಆದರೆ ಸಹಾಯ ಮಾಡುವಾಗಲೂ ಕೆಲವರು ತಮ್ಮ ಉಪಕಾರವನ್ನು ಅಹಂಕಾರದಿಂದ ಹೇಳಿಕೊಳ್ಳುತ್ತಾರೆ. “ನಾನು ನಿನಗೆ ಸಹಾಯ ಮಾಡಿದ್ದೇನೆ” ಎಂದು ಪದೇಪದೇ ನೆನಪಿಸುವ ಸಹಾಯಕ್ಕಿಂತ, ಪ್ರತಿಫಲದ ನಿರೀಕ್ಷೆಯಿಲ್ಲದೆ ಮೌನವಾಗಿ ಮಾಡಿದ ಸಹಾಯವೇ ನಿಜವಾದ ಮಾನವೀಯತೆ.ಇಂದು ಯಾರಿಗೋ ನಾವು ನೀಡಿದ ಒಂದು ಒಳ್ಳೆಯ ಮಾತು, ನಾಳೆ ಅವರ ಜೀವನದಲ್ಲಿ ಹೊಸ ಭರವಸೆಯಾಗಬಹುದು. ಒಂದು ಪ್ರೋತ್ಸಾಹದ ಮಾತು ಕುಗ್ಗಿದ ಮನಸ್ಸನ್ನು ಎಬ್ಬಿಸಬಹುದು. ಒಂದು ಧೈರ್ಯದ ಮಾತು ಸೋಲಿನ ಅಂಚಿನಲ್ಲಿರುವ ವ್ಯಕ್ತಿಯನ್ನು ಮತ್ತೆ ಹೋರಾಡುವಂತೆ ಮಾಡಬಹುದು.

ಆದ್ದರಿಂದ ಮಾತು ಕೂಡ ಒಂದು ದಾನವೇ. ಹಣ ಕೊಡಲು ಸಾಧ್ಯವಾಗದಿದ್ದರೂ ಒಳ್ಳೆಯ ಮಾತು ಕೊಡಬಹುದು. ಸಮಯ ಕೊಡಲು ಸಾಧ್ಯವಾಗದಿದ್ದರೂ ಧೈರ್ಯ ಕೊಡಬಹುದು. ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗದಿದ್ದರೂ, ಸಮಸ್ಯೆಯಲ್ಲಿರುವ ವ್ಯಕ್ತಿಯ ಪಕ್ಕದಲ್ಲಿ ನಿಂತು “ಭಯಪಡಬೇಡ, ಎಲ್ಲವೂ ಸರಿಯಾಗುತ್ತದೆ” ಎಂದು ಹೇಳಬಹುದು.

ಅಂತಹ ಮಾತುಗಳನ್ನು ಹೇಳುವವರು ತಮ್ಮ ದೊಡ್ಡತನವನ್ನು ಪ್ರದರ್ಶಿಸುವ ಅಗತ್ಯವಿಲ್ಲ. ಏಕೆಂದರೆ ಅವರ ಮಾನವೀಯತೆಯೇ ಅವರ ನಿಜವಾದ ಎತ್ತರ.ಒಂಟೆ ಎಷ್ಟೇ ಎತ್ತರವಾಗಿದ್ದರೂ ಆಹಾರಕ್ಕಾಗಿ ತಲೆ ಬಾಗಲೇಬೇಕು. ಅದೇ ರೀತಿ ಮನುಷ್ಯ ಎಷ್ಟೇ ಎತ್ತರಕ್ಕೆ ಏರಿದರೂ ಜೀವನದ ಮುಂದೆ ಒಂದು ದಿನ ತಲೆ ಬಾಗಲೇಬೇಕು.ಆದ್ದರಿಂದ ಅಹಂಕಾರದಿಂದ ಎತ್ತರ ತೋರಿಸುವುದಕ್ಕಿಂತ, ವಿನಯದಿಂದ ಮತ್ತೊಬ್ಬರನ್ನು ಎತ್ತರಕ್ಕೆತ್ತುವುದು ಉತ್ತಮ.“ನಮ್ಮ ಬಳಿ ಎಷ್ಟು ಇದೆ ಎಂಬುದು ನಮ್ಮ ದೊಡ್ಡತನವಲ್ಲ;ನಮ್ಮ ಬಳಿ ಇರುವುದರಲ್ಲಿ ಎಷ್ಟು ಜನರ ಕಷ್ಟಕ್ಕೆ ನೆರವಾಗಿದ್ದೇವೆ ಎಂಬುದೇ ನಮ್ಮ ನಿಜವಾದ ದೊಡ್ಡತನ.”ಒಳ್ಳೆಯ ಮಾತು ಹೇಳಿ, ಧೈರ್ಯ ತುಂಬಿ, ಸಾಧ್ಯವಾದಷ್ಟು ಸಹಾಯ ಮಾಡಿ. ಏಕೆಂದರೆ ನಾವು ಇಂದು ಯಾರಿಗೋ ನೀಡಿದ ಭರವಸೆ, ನಾಳೆ ನಮ್ಮ ಜೀವನದಲ್ಲಿಯೂ ಒಂದು ಬೆಳಕಾಗಿ ಮರಳಿ ಬರಬಹುದು.“ಜೀವನದಲ್ಲಿ ಎಷ್ಟು ಎತ್ತರಕ್ಕೆ ಏರಿದ್ದೇವೆ ಎಂಬುದಕ್ಕಿಂತ, ಎಷ್ಟು ಜನರನ್ನು ಗೌರವದಿಂದ ನಡೆಸಿಕೊಂಡಿದ್ದೇವೆ ಎಂಬುದೇ ನಮ್ಮ ನಿಜವಾದ ಎತ್ತರ.”

– ಸಾನಿಯಾ ಕೌಸರ್ , ಸಮಾಜ ಕಾರ್ಯಕರ್ತೆ

ಸರ್ಕಾರಿ ಬಸ್ ನಿಲ್ದಾಣದಲ್ಲಿರುವ ಅಂಗಡಿಗಳ ತೆರವು

ರಾಮನಗರ : ನಗರದ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದಲ್ಲಿನ ಅಂಗಡಿ ಮಳಿಗೆಗಳಿಗೆ ಕೆಎಸ್‌ಆರ್‌ಟಿಸಿ ರಾಮನಗರ ವಿಭಾಗ ನಿಯಂತ್ರಣಾಧಿಕಾರಿ ಪುರುಷೋತ್ತಮ್ ನೇತೃತ್ವದಲ್ಲಿ ಅಧಿಕಾರಿಗಳು ಅಂಗಡಿಗಳಿಗೆ ಬೀಗ ಜಡಿದು ತೆರವುಗೊಳಿಸಿದ ಘಟನೆ ಶುಕ್ರವಾರ ನಡೆಯಿತು.



ರಾಮನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿರುವ 12 ಅಂಗಡಿ ಮಳಿಗೆಗಳನ್ನು ಅಧಿಕಾರಿಗಳು ಭಾಗಿಲು ಮುಚ್ಚಿಸಿದ್ದರು. ಈ ವೇಳೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮತ್ತು ಅಂಗಡಿ ಮಾಲೀಕರ ನಡುವೆ ಮಾತಿನ ಚಕಮುಕಿ ನಡೆಯಿತು. ಅಧಿಕಾರಿಗಳು ಸಿಬ್ಬಂದಿಗಳು ಮತ್ತು ಪೋಲೀಸರ ಸಹಾಯ ಪಡೆದು ಅಂಗಡಿಗಳ ಬಾಗಿಲು ಮುಚ್ಚಿಸುವಲ್ಲಿ ಯಶಸ್ವಿಯಾದರು.

ಈ ವೇಳೆ ಒಂದಷ್ಟು ಅಧಿಕಾರಿಗಳ ಮತ್ತು ಅಂಗಡಿ ಮಾಲೀಕರ ನಡುವೆ ಮಾತಿನ ಬಿಸಿ ಜೋರಾಗಿತ್ತು ಅಂಗಡಿ ಮಾಲೀಕರು ನಾವು ಬಾಡಿಗೆ ಸರಿಯಾಗಿ ಪಾವತಿ ಮಾಡಿಕೊಂಡು ಬರುತ್ತಿದ್ದೇವೆ. ಟೆಂಡರ್ ಪಡೆದವರು ಹಣ ಕಟ್ಟಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ, ಇಂದು ಬಂದು ನಮಗೆ ಏಕಾಏಕಿ ಯಾವುದೇ ಮಾಹಿತಿ ನೀಡದೆ ಅಂಗಡಿಗಳನ್ನು ಬಲವಂತವಾಗಿ ನಮ್ಮನ್ನು ಅಂಗಡಿಗಳಿಂದ ಹೊರಗೆ ನೂಕಿ ಬಾಗಿಲಿಗೆ ಬೀಗ ಹಾಕಿಸಿದ್ದಾರೆ. ನಾವು ಲಕ್ಷಾಂತರ ಬಂಡವಾಳ ಹಾಕಿ ಇದನ್ನೇ ನಂಬಿ ನಮ್ಮ ಕುಟುಂಬ ಜೀವನ ನಡೆಸುತ್ತಿದ್ದೇವೆ ಅಧಿಕಾರಿಗಳು ಕೂಡಲೇ ನಮಗೆ ಅಂಗಡಿ ಬಾಗಿಲು ತೆಗೆದು ವ್ಯಾಪಾರ ನಡೆಸಲು ಅವಕಾಶ ಮಾಡಿಕೊಡಬೇಕು ಎಂದು ಮೊಬೈಲ್ ಅಂಗಡಿ ಮಾಲೀಕ ನಿತಿನ್ ಹೇಳುತ್ತಾರೆ.

ಅಂಗಡಿಗಳಿಗೆ ಬೀಗ ಹಾಕಿಸುವ ಸಮಯದಲ್ಲಿ ನೂರಾರು ಜನರು ಜಮಾಯಿಸಿದ್ದರು. ಪೋಲೀಸರು ಮಧ್ಯೆ ಪ್ರವೇಶಿಸಿ ವಾತಾವರಣ ತಿಳಿಗೊಳಿಸಿದರು. ಡಿಎಸ್‌ಪಿ ಶ್ರೀನಿವಾಸ್, ವೃತ್ತ ನಿರೀಕ್ಷಕ ರಮೇಶ್, ಐಜೂರು ಠಾಣೆ ಸಬ್ ಇನ್‌ಸ್ಪೆಕ್ಟರ್ ಜರ್ಜ್ ಪ್ರಕಾಶ್, ಚನ್ನಕೇಶವ ನೇತೃತ್ವದಲ್ಲಿ ಪೋಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಕೆಎಸ್‌ಆರ್‌ಟಿಸಿ ರಾಮನಗರ ವಿಭಾಗ ನಿಯಂತ್ರಣಾಧಿಕಾರಿ ಪುರುಷೋತ್ತಮ್ ಸುದ್ದಿಗಾರರ ಜೊತೆ ಮಾತನಾಡಿ ಮೂಲ ಟೆಂಡರ್ ಉಮೇಶ್ ಎನ್ನುವವರಿಗೆ ಆಗಿದ್ದು ಅವರು ಸಬ್ ಟೆಂಡರ್ ನಟೇಶ್ ಎಂಬುವರಿಗೆ ನೀಡಿದ್ದಾರೆ. ಆದರೆ ಅವರು ಸಂಸ್ಥೆಗೆ ಸುಮಾರು ಈ ಹಿಂದೆಯೆ ಒಂದೂವರೆ ಕೋಟಿ ಹಣ ಕಟ್ಟಬೇಕಿತ್ತು ಈಗ ಎರಡು ಕೋಟಿಗೂ ಹೆಚ್ಚು ಬಾಡಿಗೆ ಆಗಿದೆ. ಆದರೆ ಅವರು ಕಳೆದ ಕೆಲವು ತಿಂಗಳ ಹಿಂದೆ ಹೈಕೋರ್ಟ್‌ಗೆ ಹೋಗಿದ್ದರು. ಕರ್ಟ್ ಕೂಡ ಅವರಿಗೆ 50 ಲಕ್ಷ ಪಾವತಿಸಲು ತಿಳಿಸಿತ್ತು ಆದರೆ ಅವರು 25 ಲಕ್ಷ ಕಟ್ಟಿ 25 ಲಕ್ಷ ಕಟ್ಟಲಿಲ್ಲ. ಅವರ ಕೇಸ್‌ಗೆ ಸಂಬಂದಿಸಿದಂತೆ ಸಂಸ್ಥೆ ಪರವಾಗಿ ಆದೇಶ ಬಂದ ಕಾರಣ ಇಂದು ತೆರವು ಕರ‍್ಯಚರಣೆ ಮಾಡಲಾಗಿದೆ. ಯಾವುದೇ ಪರವಾನಗಿ ಇಲ್ಲದಿದ್ದರೆ ಅಥವಾ ಒಪ್ಪಂದದ ಪ್ರಕಾರ ಅನುಮತಿ ಪಡೆಯದಿದ್ದರೆ ಅವರಿಗೆ ಯಾವುದೇ ಅಧಿಕಾರವಿಲ್ಲ. ರದ್ದತಿ ಆದೇಶದ ನಂತರ ಆ ಜಾಗವನ್ನು ಖಾಲಿ ಮಾಡಿಕೊಳ್ಳಬೇಕೆಂದು ರಿಜಿಸ್ಟರ್ ಅಗ್ರಿಮೆಂಟ್ ಆಗಿದೆ ಆ ಹಿನ್ನಲೆಯಲ್ಲಿ ನಾವು ಅಂಗಡಿ ಬಾಡಿಗೆದಾರರಿಗೆ ಮೊದಲೇ ತಿಳಿಸಿದ್ದರೂ ಅವರು ಖಾಲಿ ಮಾಡದ ಕಾರಣ ಪೋಲೀಸರ ಸಹಾಂಯ ನಮ್ಮ ಅಧಿಕಾರಿ, ಸಿಬ್ಬಂದಿಗಳ ಮೂಲಕ ಅಂಗಡಿಗಳನ್ನು ತೆರವುಗೊಳಿಸಲಾಗಿದೆ.

ಮುಂದಿನ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ಅಂಗಡಿ ಮಾಲೀಕರು ಅಲ್ಲಿಯೇ ಮಳಿಗೆ ತೆರೆದು ವ್ಯಾಪಾರ ಮಾಡಲು ಇಚ್ಚೆ ಪಟ್ಟರೆ ಸಂಸ್ಥೆ ನಿಯಮಾವಳಿ ಪ್ರಕಾರ ಈಗ ಅವರು ಟೆಂಡರ್ ದಾರರಿಗೆ ನೀಡುತ್ತಿರುವ ಬಾಡಿಗೆ ದರದಂತೆ ಸಂಸ್ಥೆಗೆ ತಾತ್ಕಲಿಕ ಒಪ್ಪಂದ ನೀಡಿ ಅಂಗಡಿ ತೆರೆದು ಮುಂದುವರಿಯಲು ಅವರಿಗೆ ಮಾನವೀಯ ಅವಕಾಶ ಕಲ್ಪಿಸಲಾಗುತ್ತದೆ ಎಂದರು.

ಕೆ.ಎಸ್.ಆರ್.ಟಿ.ಸಿ. ಕರ್ಮಿಕ ಘಟಕ ಅಧಿಕಾರಿ ಕೆ.ಕೆ. ಸೋಮಶೇಖರ, ಯಾಂತ್ರಿಕ ಶಿಲ್ಪಿ ಮುತ್ತುರಾಜು, ಕಾನೂನು ಅಧಿಕಾರಿ ಸೌಮ್ಯ, ಲೆಕ್ಕಾಧಿಕಾರಿ ಶಿವಾಜಿ, ಆಡಳಿತಾಧಿಕಾರಿ ಜಯರಾವ್, ಭದ್ರತಾ ಜಾಗೃತ ಅಧಿಕಾರಿ ಸ್ಮಿತಾ, ಘಟಕ ವ್ಯವಸ್ಥಾಪಕ ಶಂಕರ್, ಭದ್ರತಾ ಅಧಿಕಾರಿ ಶೀಲಾ ಇದ್ದರು.

ಕ್ಷೇತ್ರದ ಅಭಿವೃದ್ಧಿ ಕೊಡುಗೆ ನೀಡಿದ: ಬಿ.ಸಿ.ನಾಗೇಶ್

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: 2008 ಮತ್ತು 2018ರಲ್ಲಿ ತಿಪಟೂರು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಬಿ.ಸಿ.ನಾಗೇಶ್ ರವರು ಎ.ಬಿ.ವಿ.ಪಿ.ಯ ಕಾರ್ಯಕರ್ತರು ಸಂಘಟನೆಯಲ್ಲಿ ಅವರಿಗೆ ಅಪಾರವಾದ ಆಸಕ್ತಿ ಇತ್ತು. ಎರಡು ಅವಧಿಯ ಶಾಸಕರಾಗಿ ಅವರು ತಮ್ಮದೇ ಕ್ಷೇತ್ರದ ಅಭಿವೃದ್ಧಿಗೆ ಆದ ಕೊಡುಗೆಗಳನ್ನು ನೀಡಿದ್ದಾರೆ. ರಾಜ್ಯದ ಶಿಕ್ಷಣ ಸಚಿವರಾಗಿ ಉತ್ತಮ ಕೆಲಸ ಮಾಡಿದ್ದಾರೆ ಬಹುಕಾಲ ಅನಾರೋಗ್ಯದಿಂದ ಬಳಲುತಿದ್ದ ಅವರು ನಿಧನರಾಗಿದ್ದು ತುಮಕೂರು ಜಿಲ್ಲೆಯ ಸಾರ್ವಜನಿಕ ಕ್ಷೇತ್ರಕ್ಕೆ ಬಹುದೊಡ್ಡ ನಷ್ಟವಾಗಿದೆ. ಅವರ ಆತ್ಮಕ್ಕೆ ಪರಮಾತ್ಮ ಶಾಂತಿ ಕೊಡಲೆಂದು ಪ್ರಾರ್ಥಿಸುತ್ತೇನೆ. ಅದೇ ರೀತಿ ಅವರು ನಮ್ಮೆಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರೋತ್ಸಾಹಿಸುತ್ತಿದ್ದರು. ಸ್ನೇಹಜೀವಿ ಹಾಗೂ ಎಲ್ಲರನ್ನೂ ಪ್ರೀತಿಸುತ್ತಿದ್ದ ನಾಗೇಶ್ ರವರು ದಿಢೀರ್ ಕಣ್ಮರೆಯಾದ್ದದ್ದು ಅತ್ಯಂತ ನೋವಿನ ಸಂಗತಿಯಾಗಿದೆ ಈ ದುಃಖವನ್ನು ಬರಿಸುವಂತಹ ಶಕ್ತಿಯನ್ನು ತಮ್ಮ ಕುಟುಂಬ ವರ್ಗಕ್ಕೆ ಭಗವಂತ ನೀಡಲಿ ಎಂದು ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಡಾ.ಎಂ.ಆರ್.ಹುಲಿನಾಯ್ಕರ್ ಸಂತಾಪ ಸೂಚಿಸಿದ್ದಾರೆ.



ಇಂದು ರೈಲ್ವೆ ಪ್ರಯಾಣಿಕರ ವೇದಿಕೆಯಿಂದ ಆರೋಗ್ಯ ಶಿಬಿರ, ಪ್ರತಿಭಾ ಪುರಸ್ಕಾರ

ತುಮಕೂರು: ಜಿಲ್ಲಾ ರೈಲ್ವೇ ಪ್ರಯಾಣಿಕರ ವೇದಿಕೆಯಿಂದ ರೈಲು ಪ್ರಯಾಣಿಕರು ಮತ್ತು ಕುಟುಂಬದರಿಗೆ ಇದೇ ಶನಿವಾರ ಆ.22ರಂದು ನಗರದ ರೈಲ್ವೆ ನಿಲ್ದಾಣ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣೆ, ನೇತ್ರ ಪರೀಕ್ಷೆ ಹಾಗೂ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 9 ಗಂಟೆಗೆ ಶಾಸಕ ಜಿ.ಬಿ. ಜ್ಯೋತಿಗಣೇಶ್ ಶಿಬಿರ ಉದ್ಘಾಟಿಸುವರು. ಸಿದ್ಧಗಂಗಾ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಜಿ.ಎಸ್.ಎಸ್ ಐ ಅಂಡ್ ಇಎನ್‌ಟಿ ಆಸ್ಪತ್ರೆ ಸಹಯೋಗದಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ನಂತರ ಬೆಳಿಗ್ಗೆ 10.30ಕ್ಕೆ ರೈಲ್ವೆ ಪ್ರಯಾಣಿಕರ ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ ವಿತರಣಾ ಸಮಾರಂಭ ನಡೆಯಲಿದ್ದುಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಕಾರ್ಯಕ್ರಮ ಉದ್ಘಾಟಿಸುವರು. ಸಿದ್ಧಗಂಗಾ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್. ಪರಮೇಶ್, ರೋಟರಿ ಅಧ್ಯಕ್ಷೆ ಭಾಗ್ಯಲಕ್ಷ್ಮಿ ನಾಗರಾಜ್ ಅತಿಥಿಯಾಗಿ ಭಾಗವಹಿಸುವರು. ಜಿಲ್ಲಾ ರೈಲ್ವೆ ಪ್ರಯಾಣಿಕರ ವೇದಿಕೆ ಅಧ್ಯಕ್ಷಕ ರಣಂರಮೇಶ್ ಅಧ್ಯಕ್ಷತೆ ವಹಿಸುವರು.

ಎಂಪ್ರೆಸ್ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗೆ ಭೇಟಿ

ಸೂರ್ಯಪ್ರಗತಿನ್ಯೂಸ್.ಕಾಂ




ತುಮಕೂರು: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಮತ್ತು ಸದಸ್ಯರು ಜಿಲ್ಲಾಸ್ಪತ್ರೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಎಂಪ್ರೆಸ್ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗೆ ಭೇಟಿ ನೀಡಿ ಮಕ್ಕಳ ಹಕ್ಕುಗಳ ರಕ್ಷಣಾ ವ್ಯವಸ್ಥೆ ಕುರಿತು ಪರಿಶೀಲಿಸಲಾಯಿತು.

ಎಂಪ್ರೆಸ್ ಕರ್ನಾಟಕ ಪಬ್ಲಿಕ್ ಸ್ಕೂಲ್, ತುಮಕೂರು ಇಲ್ಲಿಗೆ ಭೇಟಿ ನೀಡಿ ಶಾಲಾ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ ಶಾಲೆಯ ಸ್ವಚ್ಛತೆ, ಮೂಲಭೂತ ಸೌಲಭ್ಯಗಳ ವ್ಯವಸ್ಥೆ ಹಾಗೂ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಆರೋಗ್ಯ ಮತ್ತು ಸುರಕ್ಷತೆ ಕಾಪಾಡುವಂತೆ ಅಲ್ಲಿನ ಶಾಲಾ ಶಿಕ್ಷಕರು ಹೆಚ್ಚಿನ ಆದ್ಯತೆ ನೀಡಿ ಕಾರ್ಯನಿರ್ವಹಿಸಬೇಕು ಎಂದು ಆಯೋಗದ ಅಧ್ಯಕ್ಷರು ತಿಳಿಸಿದರು. ನಂತರ ಶಾಲೆಯ ಅಡುಗೆ ಕೋಣೆಗೆ ಭೇಟಿ ನೀಡಿ ಅಡುಗೆ ಕೋಣೆಯ ಸ್ವಚ್ಛತೆಯನ್ನು ಹಾಗೂ ಗುಣಮಟ್ಟವನ್ನು ಕಾಪಾಡುವಂತೆ ಅಲ್ಲಿನ ಸಿಬ್ಬಂದಿಗಳಿಗೆ ತಿಳಿಸಿ, ಮಕ್ಕಳ ರಕ್ಷಣೆಯಲ್ಲಿ ನಿರ್ಲಕ್ಷ್ಯ ವಹಿಸದಂತೆ ಕ್ರಮ ವಹಿಸಲು ತಿಳಿಸಿದರು. ಈ ಸಂದರ್ಭದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕಿ ರಾಧ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಘುಚಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಘುಚಂದ್ರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪವಿತ್ರ ಆರ್.ಜಿ. ಹಾಗೂ ಅಕ್ಷರ ದಾಸೋಹದ ಸಹಾಯಕ ನಿರ್ದೇಶಕರು, ಸಿಂಡಿಕೇಟ್ ಸದಸ್ಯ ಶ್ರೇಯಾಂಕ್ ಹೆಚ್.ವಿ. ಪಾಲ್ಗೊಂಡಿದ್ದರು.

ಪದ್ಮಶ್ರೀ ಪ್ರಶಸ್ತಿ ವಿಜೇತೆ, ದಕ್ಷಿಣದ ಖ್ಯಾತ ಹಿರಿಯ ನಟಿ ಸಾಹುಕಾರ್ ಜಾನಕಿ ಇನ್ನಿಲ್ಲ

ಸೂರ್ಯಪ್ರಗತಿನ್ಯೂಸ್.ಕಾಂ

ಭಾರತೀಯ ಚಿತ್ರರಂಗದ ಖ್ಯಾತ ನಟಿ ಮತ್ತು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಾಹುಕಾರ್ ಜಾನಕಿ ಅವರ ಆರೋಗ್ಯ ಹದಗೆಟ್ಟ ಕಾರಣ ಚೆನ್ನೈನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ನಟಿ ನಿಧನರಾಗಿದ್ದಾರೆ. ಅನಾರೋಗ್ಯದ ಹಿನ್ನೆಲೆಯಲ್ಲಿ 94 ವರ್ಷದ ನಟಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. 1931ರ ಡಿಸೆಂಬರ್ 12ರಂದು ಜನಿಸಿದ ಸಾಹುಕಾರ್ ಜಾನಕಿ ಅವರನ್ನು ದಕ್ಷಿಣ ಭಾರತೀಯ ಚಿತ್ರರಂಗದ ಅತ್ಯಂತ ಗೌರವಾನ್ವಿತ ವ್ಯಕ್ತಿಗಳಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ. ಅವರ ದಶಕಗಳ ವೃತ್ತಿಜೀವನದುದ್ದಕ್ಕೂ, ಅವರು ನಟನಾ ಕಲೆಯನ್ನು ಪ್ರದರ್ಶಿಸಿದರು. ಅವರು ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂ ಸಿನಿಮಾಗಳಲ್ಲಿ ಕೆಲಸ ಮಾಡುತ್ತಿರುವ 450ಕ್ಕೂ ಹೆಚ್ಚು ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಅವರು 300ಕ್ಕೂ ಹೆಚ್ಚು ರಂಗ ನಾಟಕಗಳಲ್ಲಿ ಭಾಗವಹಿಸಿದರು. ಇದು ಅವರ ಕಲೆಗೆ ಅವರ ಸಮರ್ಪಣೆಗೆ ಸಾಕ್ಷಿಯಾಗಿದೆ.ಸಾಹುಕಾರ್ ಜಾನಕಿ ಅವರು ಎಲ್.ವಿ. ಪ್ರಸಾದ್ ನಿರ್ದೇಶನದ ತೆಲುಗು ಚಿತ್ರ "ಸಾಹುಕಾರ್" ಮೂಲಕ ತಮ್ಮ ನಟನಾ ವೃತ್ತಿಜೀವನವನ್ನು ಪ್ರಾರಂಭಿಸಿದರು. ಈ ಚಿತ್ರದ ಅಪಾರ ಯಶಸ್ಸಿನ ನಂತರ ಅವರು ಸಾಹುಕಾರ್ ಎಂಬ ಅಡ್ಡಹೆಸರನ್ನು ಪಡೆದರು. ಅದು ಅವರ ಜೊತೆ ಶಾಶ್ವತವಾಗಿ ಸಂಬಂಧ ಹೊಂದಿತು. ನಂತರ ಅವರು 1952 ರಲ್ಲಿ "ವಲಯಪತಿ" ಮೂಲಕ ತಮಿಳು ಚಲನಚಿತ್ರೋದ್ಯಮವನ್ನು ಪ್ರವೇಶಿಸಿದರು. 1959 ರ ಚಲನಚಿತ್ರ "ಮಹಿಷಾಸುರ ಮರ್ದಿನಿ" ಅವರ ವೃತ್ತಿಜೀವನದಲ್ಲಿ ಮಹತ್ವದ ಮೈಲಿಗಲ್ಲು ಎಂದು ಸಾಬೀತಾಯಿತು. ದಂತಕಥೆ ಡಾ. ರಾಜ್‌ಕುಮಾರ್ ಅವರೊಂದಿಗೆ ನಟಿಸಿದ ಈ ಕನ್ನಡ ಚಲನಚಿತ್ರವನ್ನು ಕನ್ನಡ ಭಾಷೆಯ ಮೊದಲ ಪ್ಯಾನ್-ಇಂಡಿಯಾ ಚಿತ್ರವೆಂದು ಪರಿಗಣಿಸಲಾಗಿದೆ. "ಇರು ಕೊಡುಗಲ್," "ತಿರುನೀಲ್ಕಂಠರ್," "ಬಾಟಸರಿ," ಮತ್ತು "ಪುಧಿಯ ಪರವೈ" ಸೇರಿದಂತೆ ಅನೇಕ ಸ್ಮರಣೀಯ ಚಿತ್ರಗಳಲ್ಲಿ ಅವರು ಅದ್ಭುತ ಪ್ರದರ್ಶನ ನೀಡಿದರು.



ಸಾಹುಕಾರ್ ಜಾನಕಿ ಅವರಿಗೆ ಕಲೆ ಮತ್ತು ಸಿನಿಮಾಕ್ಕೆ ನೀಡಿದ ಅತ್ಯುತ್ತಮ ಕೊಡುಗೆಗಳಿಗಾಗಿ ಹಲವಾರು ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. ಅವರಿಗೆ ಪ್ರತಿಷ್ಠಿತ ನಂದಿ ಪ್ರಶಸ್ತಿ ಮತ್ತು ಕಲೈಮಾಮಣಿ ಪ್ರಶಸ್ತಿ ನೀಡಲಾಯಿತು. ಇದಲ್ಲದೆ, ಭಾರತೀಯ ಚಿತ್ರರಂಗಕ್ಕೆ ಅವರು ನೀಡಿದ ಅನುಪಮ ಕೊಡುಗೆಯನ್ನು ಗುರುತಿಸಿ, ಭಾರತ ಸರ್ಕಾರವು ಅವರಿಗೆ ದೇಶದ ಪ್ರತಿಷ್ಠಿತ ನಾಗರಿಕ ಗೌರವವಾದ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಇತ್ತೀಚಿನ ವರ್ಷಗಳಲ್ಲಿ ಅವರು ನಟನೆಯಲ್ಲಿ ಸಕ್ರಿಯರಾಗಿದ್ದರು. ಅವರು ಕೊನೆಯ ಬಾರಿಗೆ 2023 ರಲ್ಲಿ ತೆರೆ ಕಂಡ ತೆಲುಗು ಚಿತ್ರ ಅನ್ನಿ ಮಂಚಿ ಶಕುನಮುಲೆಯಲ್ಲಿ ದೊಡ್ಡ ಪರದೆಯ ಮೇಲೆ ಕಾಣಿಸಿಕೊಂಡರು, ಇದರಲ್ಲಿ ಅವರು ಅಜ್ಜಿಯ ಪಾತ್ರವನ್ನು ನಿರ್ವಹಿಸಿದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ತುಮಕೂರು ಏರ್‌ಪೋರ್ಟ್: ಪುನರ್ ಪರಿಶೀಲನೆಗೆ ಒತ್ತಾಯ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ರಾಜ್ಯದ 2ನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತುಮಕೂರು ಜಿಲ್ಲೆಯಲ್ಲಿ ಸ್ಥಾಪನೆ ಮಾಡಿದರೆ ಕೈಗಾರಿಕೆಗಳ ಬೆಳವಣಿಗೆ, ಉದ್ಯೋಗ ಸೃಷ್ಟಿ ಸಾಧ್ಯವಾಗುತ್ತದೆ. ಆದರೆ ಸರ್ಕಾರ ಜಿಲ್ಲೆಯಲ್ಲಿ ಏರ್ ಪೋರ್ಟ್ ಪ್ರಸ್ತಾವನೆ ಕೈಬಿಟ್ಟಿರುವುದು ನಿರಾಶೆಯಾಗಿದೆ.ತುಮಕೂರು ಬಳಿ ವಿಮಾನ ನಿಲ್ದಾಣ ಸ್ಥಾಪನೆ ವಿಚಾರವನ್ನು ಸರ್ಕಾರ ಪುನರ್ ಪರಿಶೀಲನೆ ಮಾಡಬೇಕು ಎಂದು ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಕೆ.ವೇದಮೂರ್ತಿ ಒತ್ತಾಯಿಸಿದ್ದಾರೆ.

ಬೆಂಗಳೂರು ನಗರದೇಶದಲ್ಲಿ ಅತ್ಯಂತ ವೇಗವಾಗಿ ಬೆಳೆಯುವ ನಗರವಾಗಿದೆ. ಈ ನಗರದಲ್ಲಿ ಸುಮಾರು ಒಂದೂವರೆ ಕೋಟಿ ಜನಸಂಖ್ಯೆ ಇದ್ದು, ಪ್ರತಿನಿತ್ಯ 50 ಲಕ್ಷಜನ ಬೆಂಗಳೂರಿಗೆ ಬಂದು ಹೋಗುತ್ತಿದ್ದಾರೆ. ಬೆಂಗಳೂರು ಬಳಿ ಇನ್ನೊಂದು ವಿಮಾನ ನಿಲ್ದಾಣ ಸ್ಥಾಪಿಸಿದರೆ ರಾಜಧಾನಿಯ ಸಂಚಾರ ಒತ್ತಡ ಮತ್ತಷ್ಟು ಹೆಚ್ಚಾಗುತ್ತದೆ.



ಹಾಗಾಗಿ ಎರಡನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ವನ್ನುತುಮಕೂರು ಜಿಲ್ಲೆಯಲ್ಲಿ ಸ್ಥಾಪನೆ ಮಾಡುವುದು ಸೂಕ್ತ. ಇದರಿಂದ ರಾಜ್ಯದ ಹೆಚ್ಚು ಜಿಲ್ಲೆಗಳ ಜನರಿಗೆ ಪ್ರಯೋಜನವಾಗುತ್ತದೆ.ವಸಂತ ನರಸಾಪುರ ಕೈಗಾರಿಕಾ ಪ್ರದೇಶ ಏಷಿಯಾದಲ್ಲಿ ಅತಿ ದೊಡ್ಡ ಕೈಗಾರಿಕಾ ಪ್ರದೇಶವಾಗಿದ್ದು ದೊಡ್ಡ ದೊಡ್ಡ ಕೈಗಾರಿಕೆಗಳು ಇಲ್ಲಿಗೆ ಬರಲು ಏರ್‌ಪೋರ್ಟ್ ಸಹಾಯವಾಗುತ್ತದೆ ಎಂದು ತಿಳಿಸಿದ್ದಾರೆ.

ಜಿಲ್ಲೆಗೆ ರೈಲ್ವೆ ಯೋಜನೆಗಳು ಸಾಕಷ್ಟು ಬರುತ್ತಿವೆ. ನೀರಿನ ವ್ಯವಸ್ಥೆಗಾಗಿ ಹೇಮಾವತಿ, ಎತ್ತಿನಹೊಳೆ, ಭದ್ರ ಮೇಲ್ದಂಡೆ ಯೋಜನೆಗಳು ಅನುಷ್ಠಾನ ಆಗುತ್ತಿವೆ. ಕೈಗಾರಿಕೆಗಳ ಬೆಳವಣಿಗೆಯಾಗುತ್ತಿದೆ .ತುಮಕೂರು ಜಿಲ್ಲೆಯಲ್ಲಿ 13ಕ್ಕೂ ಹೆಚ್ಚು ಇಂಜಿನಿಯರಿಂಗ್ ಕಾಲೇಜುಗಳು ಪಾಲಿಟೆಕ್ನಿಕ್‌ಗಳಿದ್ದು ಇಲ್ಲಿ ಶಿಕ್ಷಣ ಪಡೆದವರಿಗೆ ಉದ್ಯೋಗ ಕಲ್ಪಿಸಲು ಅವಕಾಶವಾಗುತ್ತದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ತುಮಕೂರು ಜಿಲ್ಲೆಯಲ್ಲೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ ಮಾಡಿದರೆ ತುಮಕೂರು ನಗರದ ಸರ್ವಾಂಗೀಣ ಅಭಿವೃದ್ಧಿ ಆಗುವುದಲ್ಲದೆ, ಕರ್ನಾಟಕವನ್ನು ಮಾದರಿ ರಾಜ್ಯವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ. ಈ ಬಗ್ಗೆ ಚುನಾಯಿತ ಪ್ರತಿನಿಧಿಗಳು ಆಸಕ್ತಿ ವಹಿಸಬೇಕು ಎಂದು ಕೆ.ವೇದಮೂರ್ತಿ ಮನವಿ ಮಾಡಿದ್ದಾರೆ.



ಸಚಿವ ನಾಗೇಂದ್ರ ವಜಾಕ್ಕೆ ಪಟ್ಟು ಬಿಡದ ಬಿಜೆಪಿ; ಸದನದಲ್ಲಿ ಭಾರಿ ಗದ್ದಲ

ಸೂರ್ಯಪ್ರಗತಿನ್ಯೂಸ್.ಕಾಂ



ಬೆಂಗಳೂರು: ವಾಲ್ಮೀಕಿ ನಿಗಮ ಹಗರಣದ ಆರೋಪಿಯಾಗಿರುವ ಸಚಿವ ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಡುವಂತೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ ನಡೆಸುತ್ತಿರುವುದರಿಂದ ಸತತ 5 ನೇ ದಿನವೂ ವಿಧಾನಸಭೆ ಕಲಾಪಕ್ಕೆ ಅಡ್ಡಿ ಉಂಟಾಗಿದೆ.

ಸದನ ಆರಂಭವಾದ ತಕ್ಷಣ, ಬಿಜೆಪಿ ಮತ್ತು ಜೆಡಿಎಸ್ ಈ ವಿಷಯವನ್ನು ಪ್ರಸ್ತಾಪಿಸಿ, ನಾಗೇಂದ್ರ ಅವರನ್ನು ಸಂಪುಟದಿಂದ ತಕ್ಷಣವೇ ಕೈಬಿಡಬೇಕೆಂದು ಘೋಷಣೆಗಳನ್ನು ಕೂಗುವ ಮೂಲಕ ಒತ್ತಾಯಿಸಿದರು. ಪ್ರತಿಭಟನೆಯ ಮಧ್ಯೆ, ಸ್ಪೀಕರ್ ಜಿ.ಎಸ್. ಪಾಟೀಲ್, ಸಚಿವ ಕೆ.ಎಚ್. ಮುನಿಯಪ್ಪ ಅವರನ್ನು ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸುವಂತೆ ಕೇಳಿಕೊಂಡರು. ನಂತರ ಉಪಸಭಾಪತಿ ಮಂಕಾಳ್ ವೈದ್ಯ ಅವರನ್ನು ಸದನದಲ್ಲಿ ಕೆಲವು ಅರ್ಜಿಗಳು ಮತ್ತು ವರದಿಗಳನ್ನು ಮಂಡಿಸುವಂತೆ ಕೇಳಿದರು. ನಂತರ ಸ್ಪೀಕರ್ ಸದನದ ಪರಿಗಣನೆ ಮತ್ತು ಅಂಗೀಕಾರಕ್ಕಾಗಿ ಮಸೂದೆಗಳನ್ನು ಕೈಗೆತ್ತಿಕೊಂಡರು.

ಕರ್ನಾಟಕ ಅಪಾರ್ಟ್ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ಮಸೂದೆ, 2026; ಕರ್ನಾಟಕ ಪುರಸಭೆ ನಿಗಮಗಳು (ತಿದ್ದುಪಡಿ) ಮಸೂದೆ, 2026; ಮತ್ತು ಕರ್ನಾಟಕ ಪುರಸಭೆಗಳು (ತಿದ್ದುಪಡಿ) ಮಸೂದೆ, 2026 ಗಳನ್ನು ವಿರೋಧ ಪಕ್ಷದ ಪ್ರತಿಭಟನೆಯ ನಡುವೆಯೂ ವಿಧಾನಸಭೆಯು ಯಾವುದೇ ಚರ್ಚೆಯಿಲ್ಲದೆ ಅಂಗೀಕರಿಸಿದ ಮೂರು ಮಸೂದೆಗಳಾಗಿವೆ. ನಂತರ ಸ್ಪೀಕರ್ ಸದಸ್ಯರು ಗಮನ ಸೆಳೆಯುವ ಸೂಚನೆಗಳಿಗೆ ಉತ್ತರಗಳನ್ನು ನೀಡಿದರು ಮತ್ತು ಸದನವನ್ನು ದಿನದ ಮಟ್ಟಿಗೆ ಮುಂದೂಡಿದರು.

ಕರ್ನಾಟಕ ಮಹರ್ಷಿ ವಾಲ್ಮೀಕಿ ಎಸ್‌ಟಿ ಅಭಿವೃದ್ಧಿ ನಿಗಮದಲ್ಲಿ ಹಣ ದುರುಪಂ೨ೋಗದ ಆರೋಪದ ನಂತರ ಹಿಂದಿನ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿದ ನಾಗೇಂದ್ರ ಅವರನ್ನು ಆಗಸ್ಟ್ 3 ರಂದು ಡಿ ಕೆ ಶಿವಕುಮಾರ್ ನೇತೃತ್ವದ ಸಚಿವ ಸಂಪುಟಕ್ಕೆ ಸೇರಿಸಲಾಯಿ೨ತು. ಅವರು ಈಗ ಯೋಜನೆ ಮತ್ತು ಅಂಕಿಅಂಶ ಸಚಿವರಾಗಿದ್ದಾರೆ.

ಜುಲೈ 2024 ರಲ್ಲಿ ವಾಲ್ಮೀಕಿ ನಿಗಮ ಹಗರಣ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಬಳ್ಳಾರಿ ಶಾಸಕರನ್ನು ಬಂಧಿಸಿತ್ತು ಮತ್ತು ಆ ವರ್ಷ ಅಕ್ಟೋಬರ್‌ನಲ್ಲಿ ಬೆಂಗಳೂರಿನ ವಿಶೇಷ ನ್ಯಾಯಾಲಯ ಅವರಿಗೆ ಜಾಮೀನು ನೀಡಿತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಡಿ ಮತ್ತು ಸಿಬಿಐ ಆರೋಪಪಟ್ಟಿಯಲ್ಲಿ ನಾಗೇಂದ್ರ ಅವರನ್ನು ಹೆಸರಿಸಿದೆ.

ಭಾರತ್ ಜೋಡೋ ಯುವ ಸಂಘ ಸ್ಥಾಪನೆ : ನೋಂದಣಿಗೆ ಮನವಿ

ತುಮಕೂರು: ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 10000 ಜನಸಂಖ್ಯೆಗೆ ಒಂದರಂತೆ 16 ರಿಂದ 35 ವರ್ಷದೊಳಗಿನ ಕನಿಷ್ಠ 100 ಯುವ ಸದಸ್ಯರು ಇರುವಂತೆ ಒಟ್ಟು 35 ಭಾರತ್ ಜೋಡೋ ಯುವ ಸಂಘಗಳನ್ನು ರಚಿಸಿ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಆಸಕ್ತಿಯುಳ್ಳ ಅರ್ಹ ಯು೨ವಕ/ಯುವತಿಯರು ಆಧಾರ್ ಕಾರ್ಡ್‌ನೊಂದಿಗೆ ಭಾರತ್ ಜೊೀಡೋ ಯುವ ಸಂಘ(BJYS)ದ ಲಿಂಕ್ bjys.karn ataka.gov.in ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದು ಪಾಲಿಕೆ ಆಯುಕ್ತೆ ಬಿ. ಶುಭ ತಿಳಿಸಿದ್ದಾರೆ.

BJYS ಸಂಘ'ಗಳಲ್ಲಿ ವಿಕಾಸಶೀಲ ಮತ್ತು ಸೌಹಾರ್ದ ಶೀಲ ಕರ್ನಾಟಕ ನಿರ್ಮಾಣಕ್ಕೆ ಯುವ ವೇದಿಕೆಯನ್ನು ಸ್ಥಾಪಿಸುವುದು, ಯುವ ಜನರಲ್ಲಿ ನಾಯಕತ್ವದ ಗುಣ, ಸಾಮಾಜಿಕ ಹೊಣೆಗಾರಿಕೆ ಮತ್ತು ನಾಗರಿಕ ಪ್ರಜ್ಞೆಯನ್ನು (Responsible citizenship) ಮೂಡಿಸುವುದು, ಸ್ಥಳೀಯ ಸಮುದಾಯದ ಅಭಿವೃದ್ಧಿ, ಸಾಮಾಜಿಕ ಸಾಮರಸ್ಯ ಮತ್ತು ಪರಿಸರ ಸಂರಕ್ಷಣೆಯಲ್ಲಿ ಯುವಕರನ್ನು ನೇರ ಪಾಲುದಾರರ'ನ್ನಾಗಿ ಮಾಡುವುದು, ಕ್ರೀಡೆ, ಫಿಟ್‌ನೆಸ್ ಮತ್ತು ಕೌಶಲ್ಯಾಭಿವೃದ್ಧಿ ಮೂಲಕ ಯುವ ಜನರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣ ಸ್ಥಾಪಿಸುವುದು ಯುವ ಸಂಘಗಳು ರಚಿಸುವ ದೂರದೃಷ್ಟಿ ಹೊಂದಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಪಾಲಿಕೆಯ ಡೇ-ನಲ್ಮ್ ಶಾಖೆಯನ್ನು ಸಂಪರ್ಕಿಸಬೇಕೆಂದು ಅವರು ಮನವಿ ಮಾಡಿದ್ದಾರೆ.


ಸಣ್ ಸುದ್ದಿ



ತುಮಕೂರು ನಗರದ ಬಿ.ಎಚ್.ರಸ್ತೆಯ ಟಿಜಿಎಂಸಿ ಬ್ಯಾಂಕ್ ಆವರಣದಲ್ಲಿರುವ ಶ್ರೀ ಮಹಾಲಕ್ಷ್ಮಿ ದೇವಾಲಯದಲ್ಲಿ ವರಮಹಾಲಕ್ಷ್ಮಿ ಹಬ್ಬದಂದು ದೇವಿಗೆ ವಿಶೇಷವಾಗಿ ಹೂವಿನ ಅಲಂಕಾರ ಮಾಡಲಾಗಿತ್ತು.



ಮಧುಗಿರಿ ಪಟ್ಟಣದಲ್ಲಿರುವ ಇತಿಹಾಸಿಕ ಪುರಾತನ ಹಾಗೂ ಐತಿಹಾಸಿಕ ಕ್ಷೇತ್ರ ದೇವತೆ ಶ್ರೀ ದಂಡಿನ ಮಾರಮ್ಮ ದೇವರಿಗೆ ಶ್ರೀ ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ವಿಶೇಷ ಅಲಂಕಾರ ಮಾಡಿರುವುದು.



ತುಮಕೂರು ನಗರದ ಶ್ರೀರಾಮನಗರದಲ್ಲಿರುವ ಮಹಾಲಕ್ಷ್ಮಿ ದೇವಾಲಯದಲ್ಲಿ ವರಮಹಾಲಕ್ಷ್ಮಿ ಹಬ್ಬದಂದು ವಿಶೇಷ ಹೂವಿನ ಅಲಂಕಾರ ಏರ್ಪಡಿಸಲಾಗಿತ್ತು. ದೇವಾಲಯದ ಅಧ್ಯಕ್ಷರಾದ ದೊಡ್ಡನಂಜಪ್ಪ, ಜಿಲ್ಲಾ ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷರಾದ ಗಂಗಣ್ಣ, ಅರ್ಚಕರಾದ ಹನುಮಂತರಾಯಪ್ಪ, ಲಕ್ಕಪ್ಪ, ಷಡಾಕ್ಷರಿ ಮುಂತಾದವರಿದ್ದರು. ಬಂದ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.



ನಗರದ ಚಾಮುಂಡೇಶ್ವರಿ ದೇವಾಲಯದ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಶ್ರಮಜೀವಿ ಬೀದಿಬದಿ ವ್ಯಾಪಾರಿಗಳ ಸಂಘದ ಕಚೇರಿಯಲ್ಲಿ ವರಮಹಾಲಕ್ಷ್ಮಿ ಹಬ್ಬವನ್ನು ಆಚರಿಸಿ ಮಹಿಳೆಯರಿಗೆ ರಾಜ್ಯಾಧ್ಯಕ್ಷೆ ರಮ್ಯಶ್ರೀ ಸೀರೆ ಮತ್ತು ಬಳೆಗಳನ್ನು ವಿತರಿಸಿದರು. ರಾಜ್ಯಾಧ್ಯಕ್ಷ ಎಂ.ಗೋಪಿ, ಪ್ರಧಾನ ಕಾರ್ಯದರ್ಶಿ ಹೆಚ್.ರಾಜಣ್ಣ, ಗೌರವಾಧ್ಯಕ್ಷ ಶಿವಣ್ಣ, ವಿಜಯಕುಮಾರ್ ಬಳ್ಳ, ಆದಿಲ್ ಪಾಷ, ಸಿದ್ಧಲಿಂಗ, ಮಂಜಮ್ಮ, ರಾಘವೇಂದ್ರ ಮೀನ, ಕೆಂಪಣ್ಣ ಮುಂತಾದವರಿದ್ದರು.

ಎಲೆಮರೆಕಾಯಿಂತಿರುವ ಉದಯ್ ಗೆ ಸನ್ಮಾನ



ತುಮಕೂರಿನ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಎಲೆಮರೆ ಕಾಯಿಯಂತೆ ವೃತ್ತಿ ಜೊತೆಗೆ ಪ್ರವೃತ್ತಿ ಮಾಡುತ್ತಾ ಕ್ಷೇತ್ರದಲ್ಲಿ ಛಾಯಾಗ್ರಾಹಕನಾಗಿ ಕಾರ್ಯನಿರ್ವಹಿಸುವ ಕುಂದೂರು ಉದಯ್ ಕುಮಾರ್ ಅವರನ್ನ ಅಖಿಲ ಭಾರತ ಅಂಬೇಡ್ಕರ್ ಪ್ರಚಾರ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ದೇವರಾಜು ಅರಸು ಜಯಂತಿ ಕಾರ್ಯಕ್ರಮದಲ್ಲಿ ಆತ್ಮೀಯವಾಘಿ ಸನ್ಮಾನಿಸಿ ಸತ್ಕರಿಸಲಾಯಿತು.

ವರಮಹಾಲಕ್ಷ್ಮೀ ಹಬ್ಬದಂದು ಹಾವು ಕಡಿದು ಸಾವು

ತುರುವೇಕೆರೆ: ತಾಲ್ಲೂಕಿನ ಕಸಬಾ ಹೋಬಳಿಯ ಅಜ್ಜೇನಹಳ್ಳಿ ನಿವಾಸಿ ಎ.ಎಸ್.ಕಂಚಿರಾಯ(56) ಹಾವು ಕಡಿದು ಶುಕ್ರವಾರ ಸಾವನ್ನಪ್ಪಿದ್ದಾನೆ.ಮೃತನು ದಂಡಿನಶಿವರ ಕೆಪಿಎಸ್ ಶಾಲೆಯ ಸಹ ಶಿಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದ ಇವರು ಶುಕ್ರವಾರ ಸ್ಥಳೀಯ ರಜೆ ಇದ್ದ ಕಾರಣ ತಿಂಡಿ ತಿಂದು ತೋಟಕ್ಕೆ ತೆರಳಿದ್ದಾನೆ. ಅಲ್ಲಿ ಹುಲ್ಲು ಸ್ವಚ್ಛಗೊಳಿಸುವ ವೇಳೆ ಹಾವು ಕಚ್ಚಿದೆ. ತಕ್ಷಣ ಭಯಗೊಂಡು ಮನೆಗೆ ಓಡಿದ್ದಾನೆ. ತೀವ್ರ ಅಸ್ವಸ್ಥಗೊಂಡ ಎ.ಎಸ್.ಕಂಚಿರಾಯನನ್ನು ಮನೆಯವರು ಕಾರಿನಲ್ಲಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಕರೆತಂದಿದ್ದಾರೆ. ಅಲ್ಲಿ ಚಿಕಿತ್ಸೆ ಫಲಿಸದೆ ಸಾವನ್ನಪ್ಪಿದ್ದಾನೆ.

ಮೃತ ಶಿಕ್ಷಕನಿಗೆ ಒರ್ವ ಗಂಡು ಮಗ ಮತ್ತು ಪತ್ನಿ ಇದ್ದಾರೆ. ಈ ಸಂಬಂಧ ದಂಡಿನಶಿವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅವಕಾಶ ವಂಚಿತರಿಗೂ ಪ್ರಾತಿನಿಧ್ಯ ಅರಸು ಅವರ ಸಂವಿಧಾನವಾಗಿತ್ತು

ಸೂರ್ಯಪ್ರಗತಿನ್ಯೂಸ್.ಕಾಂ



ಚಿಕ್ಕನಾಯಕನಹಳ್ಳಿ: ದೇವರಾಜ ಅರಸು ಅವರ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯವೆಂದರೆ ಕೇವಲ ಮೀಸಲಾತಿಯ ಪ್ರಶ್ನೆ ಆಗಿರಲಿಲ್ಲ ಭೂಮಿ ಶಿಕ್ಷಣ ಉದ್ಯೋಗ ಆರ್ಥಿಕ ಭದ್ರತೆ ಮಾನವನ ಘನತೆ ಸಾಮಾಜಿಕ ಹಾಗೂ ರಾಜಕೀಯ ಪ್ರಾತಿನಿಧ್ಯ ಇವೆಲ್ಲವುಗಳ ಪರಿಕಲ್ಪನೆಯಾಗಿತ್ತು ಆದ್ದರಿಂದಲೇ ಅವರ ಆಡಳಿತದಲ್ಲಿ ಕಟ್ಟ ಕಡೆಯ ವ್ಯಕ್ತಿಗೆ ವಂಚನೆ ಆಗದಂತೆ ಕರ್ತವ್ಯ ಪಾಲನೆಯ ದಾರಿ ದೀಪವಾದರೂ ಎಂದು ತಹಶೀಲ್ದಾರ್ ಮಮತಾ ಹೇಳಿದರು.

ಪಟ್ಟಣದ ತೀನಂಶ್ರೀ ಭವನದಲ್ಲಿ ದೇವರಾಜ್ ಅರಸು ಅವರ 111ನೇ ಜನ್ಮ ದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಯಾರು ಎಷ್ಟು ಅವಕಾಶಗಳನ್ನು ಪಡೆದಿದ್ದಾರೆ ಎಂಬುದನ್ನು ತಿಳಿಯುವುದೇ ಸಾಮಾಜಿಕ ನ್ಯಾಯದ ಹೆಜ್ಜೆ ಅಂದರೆ ಕೇವಲ ಜಾತಿಗಳ ಸಂಖ್ಯೆ ಎಣಿಸುವುದಿಲ್ಲ ಅಸಮಾನತೆಯ ವಾಸ್ತವ ಚಿತ್ರವನ್ನು ಅರಿಯುವ ಸಾಧನವೇ ಅಂಕಿ ಅಂಶಗಳ ಮೂಲಕ ಶಿಕ್ಷಣ ಉದ್ಯೋಗ ಆರ್ಥಿಕ ಅಭಿವೃದ್ಧಿ ಕಲ್ಯಾಣ ಯೋಜನೆಗಳು ಇಂತಹ ಪ್ರಾತಿನಿಧ್ಯಕ್ಕೆ ಸಂಬಂಧಿಸಿದೆ ನ್ಯಾಯಯುತ ನೀತಿಗಳ ರೂಪವೇ ಇವರ ಆಧಾರವಾಗಿದ್ದವು. ಎಲ್ ಜಿ ಅವನುರ್ ಆಯೋಗದ ಮೂಲಕ ದೇಹದಿಂದ ವಿಸರ್ಜಿಸುವ ಮಲವನ್ನು ಸಮಾಜ ಅಸಹ್ಯದಿಂದ ದೂರವಿರುವಾಗ ಅದನ್ನೇ ಬಾಚಿ ತಬ್ಬಿಕೊಂಡು ತಲೆಯ ಮೇಲೆ ಹೊತ್ತು ಸಾಗಿಸುವ ಅಮಾನುಷ ಹೇಯ್ಯ ಪದ್ಧತಿಯ ನಿರ್ಮೂಲನೆಗೆ ಅರಸು ಅವರು ಕಾನೂನು ಮತ್ತು ಆಡಳಿತಾತ್ಮಕ ವಾಗಿ ಮಹತ್ವದ ಕ್ರಮ ಕೈಗೊಂಡರು ಇಂತಹ 10 ಹಲವಾರು ಯೋಜನೆಗಳನ್ನು ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ದೊರಕಿಸುವಲ್ಲಿ ಸಫಲರಾದರು ಎಂದರು. ಲೇಖಕರು ಮತ್ತು ಚಿಂತಕರು ಕೆಪಿ ಲಕ್ಷ್ಮಿಕಾಂತ ರಾಜೇ ಅರಸ್ ಇವರು ಅರಸು ಅವರ ವಿಚಾರಧಾರೆಗಳ ಬಗ್ಗೆ ಸುದೀರ್ಘವಾಗಿ ಮಾತನಾಡುತ್ತಾ ಜೀತ ಪದ್ಧತಿ ನಿರ್ಮಾಲನೆ ಗೊಳಿಸಿ ತಳ ಸಮುದಾಯಕ್ಕೆ ಶಿಕ್ಷಣ ಮೀಸಲಾತಿಯ ತಂದ ಮಹಾ ನಾಯಕ ಇವರು ಕೇವಲ ಅವರ ಸಮುದಾಯ ಸಮಾಜವನ್ನು ಪೂಜಿಸದೆ ಸಮಾನತೆ ಸಾರುವ ಮೂಲಕ ಮಾನವೀಯ ಮೌಲ್ಯದ ಕಣಜವಾಗಿ ಎಲ್ಲರಿಗೂ ಸ್ಪೂರ್ತಿಯಾಗಿದ್ದರು ಅಲ್ಲದೆ ಸುಮಾರು ವರ್ಷಗಳಿಂದ ಭೂಮಿಯನ್ನು ಉಳುಮೆ ಮಾಡುತ್ತಿದ್ದರು ಒಡೆತನವಿಲ್ಲದೆ ಬದುಕುತ್ತಿದ್ದ ಗೇಣಿದಾರನಿಗೆ ಭೂಮಿಯ ಹಕ್ಕು ದೊರೆಯುವಂತೆ ಮಾಡಿ ದುಡಿಯುವ ವರ್ಗದ ಕೈಗೆ ಭೂಮಿ ಹಕ್ಕು ತಲುಪುವಂತೆ ಮಾಡಿದರು. ಸಮಾನ ಅವಕಾಶ ನ್ಯಾಯಯುತ ಪ್ರಾತಿನಿಧ್ಯ ಮತ್ತು ಗೌರವಯುತ ಬದುಕು ಪ್ರತಿಯೊಬ್ಬರ ಹಕ್ಕಾಗುವಂತಹ ಸಮಾಜ ನಿರ್ಮಿಸುವುದೇ ದೇವರಾಜ್ ಅರಸು ಅವರಿಗೆ ನಾವು ನೀವು ಸಲ್ಲಿಸುವ ನಿಜವಾದ ಗೌರವ ಆಗಿದೆ ಅದಕ್ಕಾಗಿ ಈ ಯುವ ಪೀಳಿಗೆಗಳು ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ದೇವರಾಜ ಅರಸು ಅವರ ಆದರ್ಶಗಳ ಪುಸ್ತಕಗಳನ್ನು ಮೈಗೂಡಿಸಿಕೊಳ್ಳುವಂತೆ ಹೇಳಿದರು.

ತಾಲೂಕ್ ಅರಸು ಸಂಘದ ಅಧ್ಯಕ್ಷ ಸಿಎಂ ಗೋಪಾಲರಾಜ ಅರಸ್ ಹರೀಶ್ ಜಂಟಿ ಕೃಷಿ ನಿರ್ದೇಶಕ ಹಾಗೂ ತಾ ಪಂ ಆಡಳಿತ ಅಧಿಕಾರಿ ಲಕ್ಷ್ಮಣ ಎಸ್ ಕಳ್ಳೇನವ್ವರ್ ಕ್ಷೇತ್ರ ಶಿಕ್ಷಣಾಧಿಕಾರಿ ಸಿ ಎಸ್ ಕಾಂತರಾಜು ಪುರಸಭಾ ಮುಖ್ಯ ಅಧಿಕಾರಿ ಮಂಜಮ್ಮ ಪಶು ಇಲಾಖೆ ಸಹಾಯಕ ನಿರ್ದೇಶಕ ಕಾಂತರಾಜು ಹಿಂದುಳಿದ ವರ್ಗದ ಕಲ್ಯಾಣಾಧಿಕಾರಿ ಟಿ ಎಸ್ ಗಂಗಾಧರ್ ತಿಮ್ಮಯ್ಯ ಜ್ಯೋತಿ ರಾಮಚಂದ್ರಯ್ಯ ಸೇರಿದಂತೆ ಅನೇಕರು ಉಪಸ್ಥಿತರಿದ್ದು ಮಾತನಾಡಿದರು

ಸಮಾಜದಲ್ಲಿನ ಅಶ್ಪೃತೆ ಹಾಗೂ ಜೀತದಾಳು ಪದ್ಧತಿ ನಿರ್ಮೂಲನೆ ಮಾಡುವಲ್ಲಿ ಅರಸು ಪಾತ್ರ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ: ದೇವರಾಜು ಅರಸು ಅವರು ರೂಪಿಸಿದ ಯೋಜನೆಗಳಿಂದ ಇಂದೂ ನಾವು ಸಮಾಜದಲ್ಲಿ ಬದಲಾವಣೆ ಕಾಣಲು ಸಾಧ್ಯವಾಗಿದೆ. ಎಂದು ಉಪವಿಭಾಗಾಧಿಕಾರಿ ಗೊಟೂರು ಶಿವಪ್ಪ ತಿಳಿಸಿದರು.

ಪಟ್ಟಣದ ಕಸಾಪದ ಕೆ.ಎನ್.ರಾಜಣ್ಣ ಸಭಾಂಗಣ ದಲ್ಲಿ ತಾಲೂಕು ಆಡಳಿತದ ವತಿಯಿಂದ ಸಮಾಜಿಕ ಪರಿವರ್ತನೆಯ ಹರಿಕಾರ ಡಿ.ದೇವರಾಜು ಅರಸುರವರ 111ನೇ ಜನ್ಮ ದಿನಾಚರಣೆಯ ಕಾರ್ಯ ಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು,

ಸಂವಿಧಾನದ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ರವರ ಆಶಯಗಳನ್ನು ರಾಜ್ಯದಲ್ಲಿ ಜಾರಿ ಮಾಡಿದವರಲ್ಲಿ ಪ್ರಮುಖರಾಗಿದ್ದಾರೆ., ಸಮಾಜದಲ್ಲಿನ ಆಶ್ಪೃತೆ ಹಾಗೂ ಜೀತದಾಳು ಪದ್ಧತಿಯನ್ನು ನಿರ್ಮೂಲನೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರು, ಹಿಂದುಳಿದ ವರ್ಗಗಳ ಜನತೆಯ ಅಭಿವೃದ್ಧಿಗಾಗಿ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಿದ ಕೀರ್ತಿ ಅರಸುರವರದು ಕಾರ್ಮಿಕರಿಗೆ ಕನಿಷ್ಠ ವೇತನ ಜಾರಿ ಅಸಂಘಟಿತ ಜೀತ ಕಾರ್ಮಿಕ ಪದ್ಧತಿ ಹೋಗಲಾಡಿಸಿದ ಕೀರ್ತಿ ಅರಸು ರವರದು ಅವರು ಅಂದಿನ ಮೈಸೂರು ರಾಜ್ಯವನ್ನು ಕರ್ನಾಟಕವೆಂದು ನಾಮಕರಣ ಮಾಡಿದರು, ಮುಖ್ಯಮಂತ್ರಿಗಳಾಗಿ ರಾಜ್ಯಕ್ಕೆ ತಮ್ಮದೆ ಆದಂತಹ ಸೇವೆಗಳನ್ನು ಸಲ್ಲಿಸಿದವರು, ಇವರು ಇಂದಿರಾ ಗಾಂಧಿಯವರನ್ನು ಚಿಕ್ಕ ಮಂಗಳೂರು ಕ್ಷೇತ್ರಕ್ಕೆ ಬರ ಮಾಡಿಕೊಂಡು ಅವರನ್ನು ಲೋಕಸಭಾ ಸದಸ್ಯೆಯನ್ನಾಗಿ ಮಾಡಿದಂತಹ ಕೀರ್ತಿ ಅರಸು ರವರಿಗೆ ಸಲ್ಲುತ್ತದೆ. ಇದರ ಜತೆಯಲ್ಲಿ ರಾಜ್ಯದಿಂದ 26 ಲೋಕಸಭಾ ಸದಸ್ಯರನ್ನು ಆಯ್ಕೆ ಮಾಡಿದರು ಅವರ ಮಾರ್ಗದರ್ಶನದಲ್ಲಿ ನಾವೆಲ್ಲಾ ಸಾಗಬೇಕಾಗಿದೆ ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕೆ.ಎನ್ ಜಯರಾಮಯ್ಯ ನವರು ಡಿ.ದೇವರಾಜು ಅರಸು ರವರ ಜೀವನ ಚರಿತ್ರೆಯ ಬಗ್ಗೆ ಕಾರ್ಯಕ್ರಮದಲ್ಲಿ ವಿವರಿಸಿದರು.

ಡಿಡಿಪಿಐ ಮಾಧವರೆಡ್ಡಿ, ಮುಖ್ಯಾಧಿಕಾರಿ ಸುರೇಶ್, ತಹಸೀಲ್ದಾರ್ ನಂದಿನಿ, ಎಆರ್ ಸಿ ಎಸ್ ಓಬಳೇಶ್, ಎಇಇ ಸಂಪತ್ ಕುಮಾರ್, ಸಿಡಿಪಿಓ ಕುಮಾರ್ ನಾಯ್ಕ, ಟಿ ಹೆಚ್ ಓ ಡಾ.ಆನಂದ್, ನೊಂದಾಣಾಧಿಕಾರಿ ಸತೀಶ್, ಬೆಸ್ಕಾಂ ಎಇಇ ಮಾಯಕಣ್ಣ ನಾಯಕ, ಪಿಡಬ್ಲೂಡಿ ಎಇಇ ಮಂಜುನಾಥ್, ಸರ್ವಜ್ಞ ವೇದಿಕೆಯ ಅಧ್ಯಕ್ಷ ವೆಂಕಟರವಣಪ್ಪ, ಕುರುಬರ ಸಂಘದ ಅಧ್ಯಕ್ಷ ಎಂ.ಡಿ.ಆನಂದ್ ಕುಮಾರ್,,ಬಲಿಜ ಸಂಘದ ಕಾರ್ಯದರ್ಶಿ ಎಂ.ವೆಂಕಟರಾಮು,ಶ್ರೀ ಸೋಮವಂಶ ಅರ್ಯ ಕ್ಷತ್ರಿಯ ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ಜಿ.ನಾರಾಯಣರಾಜು, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ರಂಗಪ್ಪ,,ಮಡಿವಾಳ ಮಾಚಿ ದೇವರ ಸಂಘದ ಅಧ್ಯಕ್ಷ ಈಶ್ವರಯ್ಯ ಹಾಗೂ ವಿದ್ಯಾರ್ಥಿಗಳು ಇದ್ದರು.

ಎಬಿವಿಪಿ ವಿಭಾಗ ಅಭ್ಯಾಸ ವರ್ಗ ಶಿವಸಿದ್ದೇಶ್ವರ ಸ್ವಾಮೀಜಿ ಪೋಸ್ಟರ್ ಬಿಡುಗಡೆ



ಸೂರ್ಯಪ್ರಗತಿನ್ಯೂಸ್.ಕಾಂ

ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿಯವರ ಅಮೃತ ಹಸ್ತದಿಂದ ಪೋಸ್ಟರ್ ಬಿಡುಗಡೆ

ತುಮಕೂರು: ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ತುಮಕೂರು ವಿಭಾಗದ ವತಿಯಿಂದ ಕಾರ್ಯಕರ್ತರ ವಿಕಾಸದ ದೃಷ್ಟಿಯಿಂದ ಸೆಪ್ಟೆಂಬರ್ 4, 5 ಮತ್ತು 6ರಂದು ತುಮಕೂರಿನ ಎಸ್ ಎಸ್ ಪುರಂ ನಲ್ಲಿರುವ ಕನ್ನಿಕಾ ಮಹಲ್ ನಲ್ಲಿ ವಿಭಾಗ ಅಭ್ಯಾಸ ವರ್ಗವನ್ನು ಆಯೋಜಿಸಲಾಗಿದೆ...

ಈ ಹಿನ್ನೆಲೆಯಲ್ಲಿ ಎಬಿವಿಪಿ ಜಿಲ್ಲಾ ಘಟಕದ ಕಾರ್ಯಕರ್ತರು ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿ, ಮಠದ ಕಿರಿಯ ಶ್ರೀಗಳಾದ ಶ್ರೀ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿಯವರ ಅಮೃತ ಹಸ್ತದಿಂದ ವಿಭಾಗ ಅಭ್ಯಾಸ ವರ್ಗದ ಪೋಸ್ಟರ್‌ನ್ನು ಬಿಡುಗಡೆ ಮಾಡಿಸಿದರು...

ಈ ಸಂದರ್ಭದಲ್ಲಿ ನಗರ ಸಂಘಟನಾ ಕಾರ್ಯದರ್ಶಿ ಸಮನ್ವಿತ್, ವಿಭಾಗ ಸಂಚಾಲಕ ಎಚ್.ಆರ್. ಗುರುಪ್ರಸಾದ್, ಕಾರ್ಯಕರ್ತರಾದ ಗೋವಿಂದರಾಜು, ಸಂಜಯ್, ಜೀವನ್, ಉಪನ್ಯಾಸಕ ನಟರಾಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ದಾಖಲೆಯಿಲ್ಲದ ಜೋಳ ಜಪ್ತಿ : ಎಪಿಎಂಸಿಯಿಂದ ಲಾರಿಗೆ ,20ಟ್ರೇಡರ್ಸ್ ಗೆ 13 ಸಾವಿರ ದಂಡ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ : ಕಳ್ಳದಾರಿಯಲ್ಲಿ ಮೆಕ್ಕೆಜೋಳವನ್ನು ತಂದು ಖಾಸಗಿ ಅಂಗಡಿಯವರಿಗೆ ಮಾರಾಟ ಮಾಡುತ್ತಿದ್ದ ಜಾಲವನ್ನು ಲಾರಿ ಸಮೇತ 300 ಕ್ವಿಂಟಾಲ್ ಮೆಕ್ಕೆಜೋಳವನ್ನು ಎಪಿಎಂಸಿ ಕಾರ್ಯದರ್ಶಿ ಆಶಾ ರವರು ಹಿಡಿದು ಕ್ವಿಂಟಾಲ್ ಗೆ ತಲಾ 2800 ರೂಗಳಂತೆ 84 ಸಾವಿರ ಮೌಲ್ಯಕ್ಕೆ ಮಾರುಕಟ್ಟೆ ಶುಲ್ಕವಾಗಿ ಕಲಂ 70 ರ ಪ್ರಕಾರ 20 ಸಾವಿರ ದಂಡ ಹಾಕಿದ್ದಾರೆ.

ಪಟ್ಟಣದ ಕಸಬ ಸಿದ್ದಾಪುರ ಹೊರವಲಯದಲ್ಲಿ ಜೋಳ ತುಂಬಿದ ಲಾರಿಯನ್ನು ನಿಲ್ಲಿಸಿ ಖಾಸಗಿ ಅಂಗಡಿಯವರಿಗೆ ಮಾರಾಟ ಮಾಡುತ್ತಿದ್ದ ಜಾಲವನ್ನು ಭೇದಿಸಿದ ಎಪಿಎಂಸಿ ಕಾರ್ಯದರ್ಶಿ ಆಶಾ ರವರು ದಾಖಲೆಯಿಲ್ಲದೆ 300 ಕ್ವಿಂಟಾಲ್ ಮೆಕ್ಕೆಜೋಳವನ್ನು ಸರಬರಾಜು ಮಾಡಲು ಬಂದ ಲಾರಿಯ ಸಮೇತ ಗೌರಿಬಿದನೂರಿನ ಅಮ್ಮಸಂದ್ರದ ವೆಂಕಟಾಚಲಪತಿ ಎಂಬುವವರಿಗೆ ಕ್ವಿಂಟಾಲ್ ಗೆ ತಲಾ 2800 ರೂಗಳಂತೆ 84 ಸಾವಿರ ಮೌಲ್ಯಕ್ಕೆ ಮಾರುಕಟ್ಟೆ ಶುಲ್ಕವಾಗಿ ಕಲಂ 70 ರ ಪ್ರಕಾರ 20 ಸಾವಿರ ದಂಡ ಹಾಕಿದ್ದು, ಇದರಲ್ಲಿ ದಾಖಲೆಯಿಲ್ಲದೆ ತನ್ನ ಮಳಿಗೆಗೆ 240 ಚೀಲ, ಮೆಕ್ಕೆ ಜೋಳವನ್ನು ಪಡೆದ ಪಟ್ಟಣದ ಅಮೃತ್ ಇಂಡಸ್ಟ್ರೀಸ್ ನ ಮಧು ಎಂಬುವವರಿಂದ ಕೂಡ ಕಲಂ 70 ರಂತೆ 13712 ರೂಗಳನ್ನು ದಂಡವಾಗಿ ಕಟ್ಟಿಸಿಕೊಳ್ಳಲಾಗಿದೆ.

ಇದೊಂದು ವರ್ಷವಿಡಿ ನಡೆಯುವ ಕಳ್ಳಮಾರ್ಗವಾಗಿದ್ದು ಈ ದಂದೆಯನ್ನು ಇದುವರೆವಿಗೂ ಯಾರೂ ಭೇದಿಸಿರಲಿಲ್ಲ. ಆದರೆ ರವಿ ಎಂಬ ಯುವಕ ನೀಡಿದ ಮಾಹಿತಿಯಂತೆ ಸ್ಥಳಕ್ಕೆ ತೆರಳಿದ ಕೆಲ ಮಾಧ್ಯಮದಿಂದ ಸತ್ಯ ಹೊರಗಡೆ ಬಂದಿತು. ಮಾಹಿತಿ ನೀಡಿದಾಕ್ಷಣದ ಸ್ಥಳಕ್ಕೆ ಪೊಲೀಸ್ ಇಲಾಖೆ ಕೃಷಿ ಇಲಾಖೆ, ಆಹಾರ ಇಲಾಖೆಯವರು ಬಂದು ಪರೀಕ್ಷಿಸಿದರು. ಆದರೆ ಇದು ನಮಗೆ ಸಂಭಂದಿಸಿದಲ್ಲ ಎಂದು ದೂರ ನಿಂತರು. ಆಗ ಎಪಿಎಂಸಿ ಕಾರ್ಯದರ್ಶಿ ಆಶಾ ಮಾಹಿತಿ ಪಡೆದು ಸ್ಥಳಕ್ಕೆ ಆಗಮಿಸಿ ತಕ್ಷಣ ಲಾರಿಯನ್ನು ಮಾಲು ಸಮೇತ ಎಪಿಎಂಸಿ ಕಚೇರಿಯ ಆವರಣಕ್ಕೆ ಕರೆತಂದು ದಂಡ ಹಾಕಿದರು. ಪೊಲೀಸರು ಇದಕ್ಕೆ ಸಹಕಾರ ನೀಡಿದರು. ಆದರೆ ಇಂತಹ ಕಳ್ಳಮಾರ್ಗವನ್ನು ಪಟ್ಟಣದ ಹಲವಾರು ಟ್ರೇಡರ್ಸ್‌ಗಳು ನಡೆಸುತ್ತಿದ್ದು ಅಧಿಕಾರಿಗಳು ರಸ್ತೆ ದಾರಿ ಕಾಯುವ ಬದಲು ಗೋದಾಮುಗಳ ಪರಿಶೀಲನೆ ಮಾಡಬೇಕು. ಇದರಿಂದ ಎಪಿಎಂಸಿಯ ಆದಾಯವು ಹೆಚ್ಚಲಿದ್ದು ಕಳ್ಳದಂಧೆಗೆ ಕಡಿವಾಣ ಬೀಳಲಿದೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟರು.

ಕುಡಿಯುವ ನೀರು ಪೂರೈಕೆಗೆ ಆದ್ಯತೆ ನೀಡಿ : ನಂಜಾವಧೂತ ಶ್ರೀ

ಸೂರ್ಯಪ್ರಗತಿನ್ಯೂಸ್.ಕಾಂ



ಯಶವಂತಪುರ: ರಾಜಧಾನಿ ಬೆಂಗಳೂರು, ಮಂಡ್ಯ ಮೈಸೂರಿನ ಕೋಟ್ಯಾಂತರ ನಾಗರಿಕರು ಕಾವೇರಿ ನೀರನ್ನು ಅವಲಂಬಿಸಿರುವ ಕಾರಣ ಕುಡಿಯುವ ನೀರು ಸರಬರಾಜಿಗೆ ಸರ್ಕಾರ ಆದ್ಯತೆ ನೀಡಬೇಕು ಎಂದು ಶಿರಾ ಪಟ್ಟ ನಾಯಕನಹಳ್ಳಿಯ ಶ್ರೀ ಸ್ಪಟಿಕಪುರಿ ಮಹಾ ಸಂಸ್ಥಾನದ ಶ್ರೀ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠದ ಪೀಠಾಧ್ಯಕ್ಷರಾದ ಶ್ರೀ ನಂಜಾವಧೂತ ಸ್ವಾಮೀಜಿ ಸಲಹೆ ನೀಡಿದರು.

ಕ್ಷೇತ್ರದ ಉಲ್ಲಾಳ ಶಾಖಾ ಮಠಕ್ಕೆ ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಭೇಟಿ ನೀಡಿದ್ದ ವೇಳೆ ಸಚಿವರೊಂದಿಗೆ ಕಾವೇರಿ ಹಾಗೂ ನೀರಾವರಿ ಯೋಜನೆಗಳ ಕುರಿತು ಸಮಾಲೋಚನೆ ನಡೆಸಿದರು.

ಈ ಬಾರಿ ಮುಂಗಾರು ಮಳೆಯ ಕೊರತೆಯಾಗಿದ್ದು ಕೃಷ್ಣರಾಜ ಸಾಗರ ಜಲಾಶಯದಲ್ಲಿ ಸಂಗ್ರಹವಾಗಿರುವ ನೀರಿನ ಪ್ರಮಾಣವು ಕಡಿಮೆಯಾಗಿದೆ ಆದ್ದರಿಂದ ರಾಜಕೀಯ, ಇತರೆ ಒತ್ತಡಗಳಿಗೆ ಮಣಿಯದೆ ವಾಸ್ತವಂಶವನ್ನು ಮನವರಿಕೆ ಮಾಡಿಕೊಡಬೇಕು. ನಾಡಿನ ಜೀವನಾಡಿ ಕಾವೇರಿ ವಿಚಾರದಲ್ಲಿ ನಾಗರಿಕರು ಹಾಗೂ ರೈತರ ಹಿತಾಸಕ್ತಿಯನ್ನು ಕಾಪಾಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ . ಎತ್ತಿನಹೊಳೆ, ಭದ್ರಾ ಮೇಲ್ದಂಡೆ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ ರೈತರಿಗೆ ಅನುಕೂಲ ಕಲ್ಪಿಸಿಕೊಡಿ ಎಂದು ತಿಳಿಸಿದರು.

ಈ ವೇಳೆ ಮಾತನಾಡಿದ ಜಲ ಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ 200 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಮಹತ್ವಕಾಂಕ್ಷಿಯ ಮೇಕೆದಾಟು ಯೋಜನೆಗೆ ಇದ್ದ ಅಡೆತಡೆಗಳು ಸದ್ಯ ನಿವಾರಣೆಯಾಗಿದ್ದು 6 ತಿಂಗಳಲ್ಲಿ ಅನುಷ್ಠಾನದ ರೂಪುರೇಷೆಗಳನ್ನು ಸಿದ್ಧಪಡಿಸಲಾಗುವುದು ಎಂದರು.

ಎತ್ತಿನಹೊಳೆ ಕಾಮಗಾರಿ ಅಂತಿಮ ಹಂತದಲ್ಲಿದ್ದು ಮೂರ್ನಾಲ್ಕು ತಿಂಗಳಲ್ಲಿ ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ದಕ್ಷಿಣ ಜಿಲ್ಲೆಗಳಿಗೆ ಪ್ರಾಯೋಗಿಕವಾಗಿ ನೀರು ಹರಿಸಲಾಗುವುದು. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರದಿಂದ 4000 ಕೋಟಿ ರೂಪಾಯಿ ಅನುದಾನ ಸಿಗುವ ನಿರೀಕ್ಷೆಯಿದ್ದು ಹಣ ಬಂದ ಕೂಡಲೇ ಕಾಮಗಾರಿ ಪುನರಾರಂಭಿಸಲಾಗುವುದು ಎಂದರು

ನೆಲ, ಜಲ, ಭಾಷೆ ವಿಚಾರದಲ್ಲಿ ಕನ್ನಡಿಗರಿಗೆ ಅನ್ಯಾಯವಾಗಲು ಬಿಡುವುದಿಲ್ಲ ರೈತರು, ಜನಸಾಮಾನ್ಯರ ಹಿತವೇ ಸರ್ಕಾರಕ್ಕೆ ಮುಖ್ಯವಾಗಿದೆ ಎಂದು ಇದೇ ವೇಳೆ ಸ್ಪಷ್ಟಪಡಿಸಿದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. CONTACT : 9901010109 GMAIL: suryapragathi2021@gmail.com.